# ಕನ್ನಡ
# KANNADA

## ತರಗತಿ

## 2

## ಭಾಗ - 2

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2016

KT 707-1/Kannada-2 (Vol-II)

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

**Prepared by :**

**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in
e-mail : scertkerala@asianetindia.com
Phone : 0471 - 2341883, Fax : 0471 - 2341869
First Edition : 2016

ಒಲವಿನ ಮುದ್ದಿನ ಮಕ್ಕಳೇ,

ಭಾಷೆಯೆಂದರೆ ಮಾತೆಯ ಮಮತೆಯ ಹಾಗೆ. ನಯ-ವಿನಯದಿಂದ ಕೂಡಿದ ಮಾತು ಎಲ್ಲರನ್ನೂ ಸೆಳೆಯುತ್ತದೆ. ನಮ್ಮ ಮಾತುಕೃತಿಗಳು ನಮ್ಮ ವ್ಯಕ್ತಿತ್ವ ಮತ್ತು ಚಿಂತನೆಗಳನ್ನು ಹೊರಗೆಡಹುತ್ತವೆ ಅಲ್ಲವೇ? ಕನ್ನಡ ನುಡಿಯು ನಮ್ಮನ್ನೆಲ್ಲ ಬೆಸೆಯುತ್ತದೆ. ಸಂಸ್ಕೃತಿಯ ಕೈಗನ್ನಡಿಯಾಗಿರುವ ನಮ್ಮ ಕನ್ನಡ ನುಡಿಯ ಹಿರಿಮೆಯನ್ನು ನೀವೆಲ್ಲರೂ ಅರಿತುಕೊಳ್ಳಬೇಕು. ಅದಕ್ಕಾಗಿ ನಿಮ್ಮ ಮನಸೂರೆಗೊಳಿಸುವಂತಹ ಕತೆ, ಕವಿತೆ, ಚಿತ್ರಕಥೆ ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಈ ಪಠ್ಯಪುಸ್ತಕದಲ್ಲಿ ಅಳವಡಿಸಿಕೊಳ್ಳಲಾಗಿದೆ. ನಿಮ್ಮ ಭಾವನೆಗಳು ಮತ್ತು ಅನುಭವಗಳನ್ನು ಪ್ರಕಟಿಸಲು ಈ ಪಠ್ಯಪುಸ್ತಕವು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ. ಈ ಪಠ್ಯಪುಸ್ತಕದಲ್ಲಿರುವ ಉತ್ತಮ ಮೌಲ್ಯಗಳು ಮತ್ತು ಚಿಂತನೆಗಳು ನಿಮ್ಮ ಬದುಕಿಗೆ ದಾರಿದೀಪವಾಗಲಿ. ಕನ್ನಡ ಕುಸುಮದ ಕಂಪನ್ನು ಪಸರಿಸಲು ನಿಮಗೆಲ್ಲರಿಗೂ ಸಾಧ್ಯವಾಗಲಿ ಎಂದು ಹಾರೈಸುತ್ತೇನೆ.

ಪ್ರೀತಿಪೂರ್ವಕ,

**ಡಾ.ಜೆ.ಪ್ರಸಾದ್**

ನಿರ್ದೇಶಕರು

ಎಸ್.ಸಿ.ಇ.ಆರ್.ಟಿ., ಕೇರಳ

# TEXT BOOK DEVELOPMENT COMMITTEE

## KANNADA

## STANDARD 2

Participants : Arathi K., S.A.T.H.S. Manjeshwar
Jalajakshi P., G.H.S.S. Bellur
Kumara Subrahmanya M., D.I.E.T. Lab School Maipady
Mahalinga Bhat N., A.U.P.S. Dharmathadka
Ravishankar K., G.J.B.S. Peral
Srikumari K., A.U.P.S. Anekal

Experts : Dr. Rathnakara Mallamoole, Asst. Professor, Govt. College, Kasaragod
Shridhara N., Asst. Professor, Govt. College, Kasaragod
Dr. Srikrishna Bhat, Rtd. Professor, Govt. College, Kasaragod

Artists : Madhusoodhan K.V., G.V.H.S.S. Thrikaripur
Rajendra Prasad C.K., G.H.S.S. Uppala.
Sacheendran Karadka

Academic Co-Ordinator

Dr. Faisal Mavulladathil, Research Officer, SCERT, Thiruvananthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರ - 695 012






| ಕ್ರಮ ಸಂಖ್ಯೆ | ಘಟಕ | ಪುಟಸಂಖ್ಯೆ |
| --- | --- | --- |
| 5. | ಮೊಟ್ಟೆಯೋ ಮರಿಯೋ | 102 |
| 6. | ಜೀವಜಲ | 130 |
| 7. | ತಿನ್ನುವ ಬೆಳೆಯುವ | 152 |
| 8. | ಸಂತಸದ ಯಾನ | 172 |

ಪಾಠ – 5

# ಮೊಟ್ಟೆಯೋ ಮರಿಯೋ

## ಒಂಟೆಯ ದುಃಖ

ಚಂಪಕವನ ಎಂಬ ಕಾಡಿನಲ್ಲಿ ಅನೇಕ ಪ್ರಾಣಿಗಳು ಇದ್ದವು. ಎಲ್ಲಾ ಪ್ರಾಣಿಗಳೂ ಅಲ್ಲಿ ಅನ್ಯೋನ್ಯವಾಗಿ ವಾಸವಾಗಿದ್ದವು. ಅಲ್ಲಿ ತಿನ್ನಲು ಬೇಕಾದಷ್ಟು ಆಹಾರ, ಇಷ್ಟಾನುಸಾರವಾಗಿ ಓಡಾಡಲು ಬೇಕಾದ ಸ್ಥಳ, ಎಲ್ಲವೂ ಇದ್ದವು. ಚಂಪಕವನದ ಸಮೀಪವೇ ಚಂಪಾ ಎಂಬ ಊರು ಇತ್ತು. ಅಲ್ಲಿ ಮೀರಾ ತನ್ನ ತಂದೆ ತಾಯಿಯರೊಂದಿಗೆ ವಾಸವಾಗಿದ್ದಳು. ಒಂದು ದಿನ ಮೀರಾ ತನ್ನ ಗೆಳೆಯರೊಂದಿಗೆ ಆಡುತ್ತಾ ಚಂಪಕವನದ ಸಮೀಪಕ್ಕೆ ಬಂದಳು.




ಅಲ್ಲಿ ಒಂಟೆಯೊಂದು ಕಣ್ಣೀರು ಸುರಿಸುತ್ತಾ ಕುಳಿತಿತ್ತು.

ಮೀರಾ ಆ ಒಂಟೆಯ ಹತ್ತಿರಕ್ಕೆ ಬಂದಳು. ಒಂಟೆ ತುಂಬಾ ಬೇಸರದಲ್ಲಿತ್ತು. "ನೀನು ಯಾಕೆ ಅಳುತ್ತಿರುವೆ?" ಮೀರಾ ಒಂಟೆಯೊಡನೆ ಕೇಳಿದಳು. "ನಾನು ಭಾಗ್ಯವಿಲ್ಲದ ಜೀವಿ. ನನಗೆ ನನ್ನ ಬಗ್ಗೆ ಛೀ ಅನಿಸುತ್ತಿದೆ" ಎಂದು ಗಟ್ಟಿಯಾಗಿ ಅಳಲು ಆರಂಭಿಸಿತು. "ಯಾಕೆ ಹಾಗೆ ಹೇಳುತ್ತೀಯಾ? ಸ್ವಲ್ಪ ವಿವರಿಸಿ ಹೇಳು" ಎಂದಳು ಮೀರಾ. "ನೋಡು ನನ್ನ ಶರೀರ. ಅಂಕು ಡೊಂಕಾಗಿದೆ. ಉದ್ದವಾದ ಕಾಲುಗಳು, ನೀಳವಾದ ಮತ್ತು ಬಾಗಿದ ಕುತ್ತಿಗೆ, ಕೆಸರಿನ ಬಣ್ಣದಂತಿರುವ ಮೈ ಬಣ್ಣ, ಬೆನ್ನ ಮೇಲೊಂದು ಡುಬ್ಬ. ನಾನು ಕಾಣಲು ಚಂದವೇ ಇಲ್ಲ" ಎಂದು ಹೇಳಿತು. "ನೋಡು ನಾನು ವಾಸವಿರುವಲ್ಲಿ ಮುಳ್ಳಿನ ಗಿಡಗಳು ಮಾತ್ರವೇ ಇವೆ. ಅವುಗಳನ್ನೇ ನಾನು ತಿನ್ನಬೇಕಷ್ಟೆ. ನನಗೆ ವಾಸಕ್ಕೆ ಸರಿಯಾದ ಮನೆಯೂ ಇಲ್ಲ" ಎಂದು ತನ್ನ ಅಳಲನ್ನು ಹೇಳಿಕೊಂಡಿತು.

"ನೀನು ಬೇಸರ ಮಾಡಬೇಡ ಒಂಟೆಯಣ್ಣ. ನಿನ್ನನ್ನು ನಾನು ನನ್ನ ಗೆಳೆಯನಾದ ಆಮೆಯ ಬಳಿಗೆ ಕರೆದೊಯ್ಯುವೆ. ನೀನು ಅವನನ್ನು ನೋಡು" ಎಂದಳು ಮೀರಾ.



ಅವರಿಬ್ಬರೂ ಆಮೆಯ ಬಳಿ ತಲುಪಿದರು. ಮೀರಾ ಆಮೆಯ ಬಳಿ ಒಂಟೆಯ ದುಃಖದ ಕಾರಣವನ್ನು ಹೇಳಿದಳು. ಅದನ್ನು ಕೇಳಿದ ಆಮೆಗೆ ನಗು ಬಂತು. “ಒಂಟೆಯಣ್ಣಾ ನೀನು ನನ್ನನ್ನು ಸರಿಯಾಗಿ ನೋಡು. ನನಗೆ ಚಿಕ್ಕ ಚಿಕ್ಕ ಕಾಲುಗಳು, ಸಣ್ಣದಾದ ಕುತ್ತಿಗೆ, ಬೆನ್ನಿನ ಮೇಲೆ ಭಾರವಾದ ಚಿಪ್ಪು. ಅದನ್ನು ಹೊತ್ತುಕೊಂಡೇ ನಾನು ತೆವಳುತ್ತಾ ಸಂಚರಿಸಬೇಕು. ನನಗೆ ವೇಗವಾಗಿ ಚಲಿಸಲೂ ಸಾಧ್ಯವಿಲ್ಲ. ಆದರೂ ನಾನು ಬೇಸರಪಟ್ಟುಕೊಳ್ಳುವುದೇ ಇಲ್ಲ” ಎಂದಿತು. “ಆದರೆ, ನೋಡು ನನ್ನನ್ನು ಯಾರಾದರೂ ಹಿಡಿಯಲು ಬಂದರೆ ನನ್ನ ಕೈಕಾಲು ಬಾಲಗಳನ್ನು ಒಳಗೆ ಎಳೆದುಕೊಂಡು ನನ್ನನ್ನು ನಾನೇ ರಕ್ಷಿಸುವೆ” ಆಮೆ ಹೇಳಿತು. ಇದನ್ನು ಕೇಳಿದ ಒಂಟೆಗೆ ಸ್ವಲ್ಪ ಸಮಾಧಾನವಾಯಿತು.



“ಬಾ ಒಂಟೆಯಣ್ಣಾ. ನಿನಗೆ ನನ್ನ ಇನ್ನೊಬ್ಬ ಗೆಳೆಯನನ್ನು ತೋರಿಸುವೆ.” ಮೀರಾ ಹೇಳಿದಳು.

ಒಂಟೆ ಮತ್ತು ಮೀರಾ ನಡೆದುಕೊಂಡು ಮುಂದೆ ಸಾಗಿದರು. ಅಲ್ಲೇ ಕಲ್ಲಿನ ಮೇಲೆ ಕಾಗೆಯೊಂದು ಕುಳಿತಿತ್ತು. “ಆ ಕಲ್ಲಿನ ಮೇಲೆ ಕುಳಿತ ಕಾಗೆಯನ್ನು ನೋಡು” ಎಂದಳು ಮೀರಾ. ಮೀರಾ ಒಂಟೆಯೊಡನೆ ಕಾಗೆಯ ಬಳಿಗೆ ಬಂದಳು. “ನೋಡು ಅದರ ಮೈಬಣ್ಣ ಕಪ್ಪು, ಸ್ವರ ತುಂಬಾ ಕರ್ಕಶ. ಕಾ... ಕಾ... ಎಂದು ಕೂಗುತ್ತದೆ. ಆದರೂ ಅದು ಬೇಸರಪಟ್ಟುಕೊಳ್ಳುವುದೇ ಇಲ್ಲ” ಎಂದಳು.





ಇವರನ್ನೆಲ್ಲಾ ನೋಡಿದ ಒಂಟೆಯ ಮುಖದಲ್ಲಿ ಸ್ವಲ್ಪ ನಗು ಕಾಣಿಸಿತು. ಮೀರಾ ತನ್ನ ಇತರ ಗೆಳೆಯರನ್ನು ತೋರಿಸಿದಳು. ಆಗ ಒಂಟೆಯ ದುಃಖವೆಲ್ಲಾ ಮರೆಯಾಯಿತು. ಅಂದಿನಿಂದ ಒಂಟೆ ತನ್ನ ಬಗ್ಗೆ ಬೇಸರಪಟ್ಟುಕೊಳ್ಳಲೇ ಇಲ್ಲ.

## ಉತ್ತರಿಸಿ

- ಒಂಟೆಗೆ ಬೇಸರವಾಗಲು ಕಾರಣವೇನು?
- ಮೀರಾ ಒಂಟೆಯನ್ನು ಮೊದಲು ಯಾರ ಬಳಿ ಕರೆದುಕೊಂಡು ಹೋದಳು?
- ಆಮೆ ತನ್ನ ಬಗ್ಗೆ ಏನೇನು ಹೇಳಿತು?
- ಆಮೆ ತನ್ನನ್ನು ತಾನು ಹೇಗೆ ರಕ್ಷಿಸಿಕೊಳ್ಳುತ್ತದೆ?
- ಮೀರಾ ಒಂಟೆಯನ್ನು ಬೇರೆ ಯಾವ ಯಾವ ಗೆಳೆಯರ ಬಳಿಗೆ ಕರೆದುಕೊಂಡು ಹೋಗಿರಬಹುದು?

## ಬರೆಯಿರಿ

**ಈ ಕೆಳಗಿನ ಮಾತನ್ನು ಯಾರು ಹೇಳಿದರು ಎಂದು ಬರೆಯಿರಿ.**

- ‘ನನ್ನ ಬೆನ್ನಮೇಲೊಂದು ಡುಬ್ಬ’

- ‘ನೀನು ಯಾಕೆ ಅಳುತ್ತಿರುವೆ?’

- ‘ನನಗೆ ವೇಗವಾಗಿ ಚಲಿಸಲು ಸಾಧ್ಯವಿಲ್ಲ’

- ‘ನನ್ನ ಬಣ್ಣ ಕಪ್ಪು’

## ಬರೆಯಿರಿ

ಒಂಟೆಯೊಂದು – ಒಂಟೆ ಒಂದು

ಮೇಲೊಂದು –

ಕಾಗೆಯೊಂದು –

ಸಮಾಧಾನವಾಯಿತು –




**ಅಡಿಗೆರೆ ಎಳೆದ ಪದದ ವಿರೋಧಾರ್ಥ ಪದವನ್ನು ಆವರಣದಿಂದ ಆರಿಸಿ ಬರೆಯಿರಿ.**

**(ಸಂತೋಷ, ಗಿಡ್ಡ, ವೇಗ, ಇಂಪು)**

- ಒಂಟೆ ತುಂಬಾ ಬೇಸರದಲ್ಲಿತ್ತು.
- ನನ್ನ ಕಾಲುಗಳು ಉದ್ದವಾಗಿವೆ.
- ನಾನು ನಿಧಾನವಾಗಿ ಸಂಚರಿಸುತ್ತೇನೆ.
- ನನ್ನ ಸ್ವರ ತುಂಬಾ ಕರ್ಕಶ.




**ಒಂಟೆ ಮತ್ತು ಮೀರಾಳ ನಡುವೆ ನಡೆದ ಮಾತುಕತೆಯನ್ನು ಸಂಭಾಷಣಾ ರೂಪದಲ್ಲಿ ಬರೆಯಿರಿ.**

ಮೀರಾ : ______________________________

ಒಂಟೆ : ______________________________

ಮೀರಾ : ______________________________

ಒಂಟೆ : ______________________________





**ಒಂಟೆಯ ದುಃಖ ಕಥೆಯನ್ನು ಓದಿದಿರಲ್ಲವೇ? ಅದನ್ನು ಸಂಭಾಷಣೆಯ ರೂಪದಲ್ಲಿ ಬರೆದು ತರಗತಿಯಲ್ಲಿ ಅಭಿನಯಿಸಿರಿ.**

## ಓದಿರಿ



ಸಸ್ಯಗಳು ಮತ್ತು
ಅವುಗಳಿಂದ
ದೊರೆಯುವ
ವಸ್ತುಗಳನ್ನು ತಿನ್ನುವ
ಜೀವಿಗಳು
ಸಸ್ಯಾಹಾರಿಗಳು.

ಪ್ರಾಣಿಗಳು ಮತ್ತು
ಅವುಗಳಿಂದ
ದೊರೆಯುವ
ವಸ್ತುಗಳನ್ನು ತಿನ್ನುವ
ಜೀವಿಗಳು
ಮಾಂಸಾಹಾರಿಗಳು.





ಸಸ್ಯಗಳು ಮತ್ತು ಪ್ರಾಣಿಗಳು
ಹಾಗೂ ಅವುಗಳಿಂದ
ದೊರೆಯುವ ವಸ್ತುಗಳನ್ನು
ತಿನ್ನುವ ಜೀವಿಗಳು
ಮಿಶ್ರಾಹಾರಿಗಳು.

## ಬರೆಯಿರಿ

**ಕೊಟ್ಟಿರುವ ಪಟ್ಟಿಯಲ್ಲಿರುವ ಜೀವಿಗಳ ಆಹಾರ ಯಾವುದೆಂದು ಬರೆಯಿರಿ.**

| ಜೀವಿ | ಆಹಾರ |
|---|---|
| ದನ | |
| ಆಡು | |
| ಕಪ್ಪೆ | |
| ಹಲ್ಲಿ | |
| ಹುಲಿ | |
| ನಾಯಿ | |
| ಜೇಡ | |

## ಬರೆಯಿರಿ

**ನಿಮಗೆ ತಿಳಿದಿರುವ ಪ್ರಾಣಿಗಳನ್ನು ಸಸ್ಯಾಹಾರಿಗಳು, ಮಾಂಸಾಹಾರಿಗಳು ಮತ್ತು ಮಿಶ್ರಾಹಾರಿಗಳು ಎಂದು ವರ್ಗೀಕರಿಸಿ ಬರೆಯಿರಿ.**

| ಸಸ್ಯಾಹಾರಿ | ಮಾಂಸಾಹಾರಿ | ಮಿಶ್ರಾಹಾರಿ |
|---|---|---|
| | | |

## ಹಾಡಿರಿ

ಕೊಟ್ಟಿರುವ ಪದ್ಯಗಳನ್ನು ರಾಗವಾಗಿ ಹಾಡಿರಿ.



### ನಮ್ಮ ಪುಟ್ಟ

ನಮ್ಮ ಪುಟ್ಟ ಬಹಳ ದಿಟ್ಟ
ನಾಯಿ ಬಾಲ ಜಗ್ಗಿದ
ಬೌ ಬೌ ಬೊಗಳಿದಷ್ಟು
ಅವನು ಬಹಳ ಹಿಗ್ಗಿದ

– ಚನ್ನವೀರ ಕಣವಿ

### ನಾನು ಯಾರು?

ನಾನು ಪುಟ್ಟ ಪ್ರಾಣಿ
ಮಾಡೋದಿಲ್ಲ ಹಾನಿ
ಕೆಂಪುಗಾಜು ಕಣ್ಣು
ತಿನ್ನುವುದು ಹಣ್ಣು
ಹಾಲಿನಂಥ ಬಣ್ಣ
ಯಾರು ಹೇಳು ಅಣ್ಣ?

– ಸತ್ಯಾಶ್ರಯ





## ಜಾತ್ರೆಗೆ ಆನೆ

ಆನೆ ಬಂತು ಆನೆ
ದೊಡ್ಡ ಹೊಟ್ಟೆ ಆನೆ
ಗೆರಸೆ ಕಿವಿಯ ಆನೆ
ಸಣ್ಣ ಕಣ್ಣಿನ ಆನೆ
ಆನೆ ಬಂತು ಆನೆ
ಊರ ಜಾತ್ರೆಗೆ ಆನೆ

### ಬರೆಯಿರಿ

- ನಿಮ್ಮ ಇಷ್ಟದ ಯಾವುದಾದರೂ ಪ್ರಾಣಿಯ ಕುರಿತು ಒಂದು ಪದ್ಯ ಬರೆಯಿರಿ.

## ಬರೆಯಿರಿ

**ಒಗಟಿಗೆ ಉತ್ತರ ಬರೆಯಿರಿ**

ಕುಪ್ಪಳಿಸುತ್ತೇನೆ ಕಂಗಾರುವಲ್ಲ
ಹಾಡುತ್ತೇನೆ ಕೋಗಿಲೆಯಲ್ಲ
ಈಜಾಡುತ್ತೇನೆ ಮೀನಲ್ಲ
ನಾನು ಯಾರು?

ಉತ್ತರ

ಕಪ್ಪು ಮೈ, ಉದ್ದ ಬಾಲ
ಅಗೆದು ಬಿಲವ ಕೊರೆಯುವೆ
ಬೆಕ್ಕು ಬರಲು ಮಿಂಚಿನಂತೆ
ದೂರ ಓಡಿ ಹೋಗುವೆ
ನಾನು ಯಾರು?

ಉತ್ತರ

## ಬರೆಯಿರಿ

**ನಿಮಗೆ ಇಷ್ಟವಿರುವ ಯಾವುದಾದರೂ ಒಂದು ಪ್ರಾಣಿ ಅಥವಾ ಪಕ್ಷಿಯ ಹೆಸರು ಉತ್ತರವಾಗಿ ಬರುವಂತೆ ಒಗಟು ರಚಿಸಿರಿ.**

## ಬರೆಯಿರಿ

ಚಿತ್ರ ನೋಡಿ ಕಥೆ ಬರೆಯಿರಿ









## ಬಣ್ಣ ಹಚ್ಚಿರಿ

ಆದಿತ್ಯನ ಮನೆಯಲ್ಲಿ ಯಾವ ಯಾವ ಪ್ರಾಣಿ ಪಕ್ಷಿಗಳಿವೆ ಎಂದು ಚಿತ್ರ ನೋಡಿ ಬರೆಯಿರಿ.



## ಬರೆಯಿರಿ

ನಿಮ್ಮ ಮನೆಯಲ್ಲಿ ಯಾವ ಯಾವ ಪ್ರಾಣಿ ಪಕ್ಷಿಗಳನ್ನು ಸಾಕುತ್ತಾರೆ?

## ಬರೆಯಿರಿ

**ಕೆಳಗಿನ ಚಿತ್ರಕ್ಕೆ ಬಣ್ಣ ಹಚ್ಚಿರಿ.**



## ಬರೆಯಿರಿ

**ಕಾಡಿನಲ್ಲಿ ವಾಸಿಸುವ ಪ್ರಾಣಿಗಳನ್ನು ಪಟ್ಟಿ ಮಾಡಿರಿ.**

## ಬರೆಯಿರಿ

**ಕೊಟ್ಟಿರುವ ವಾಕ್ಯಗಳನ್ನು ಓದಿರಿ. ಅಲ್ಲಿ ಹೇಳಿರುವ ಜೀವಿಗಳನ್ನು ಗುರುತಿಸಿ ಬರೆಯಿರಿ.**

| | |
|---|---|
| ನನ್ನ ದೇಹ ತುಂಬಾ ದೊಡ್ಡದು. ನನಗೆ ಸೊಂಡಿಲಿದೆ. ದಾಡೆಗಳೂ ಇವೆ. | |
| ನಾನು ನಿಧಾನವಾಗಿ ಚಲಿಸುತ್ತೇನೆ. ನನ್ನ ಬೆನ್ನ ಮೇಲೆ ಚಿಪ್ಪಿನ ಮನೆಯಿದೆ. ನೆಲದಲ್ಲೂ ನೀರಿನಲ್ಲೂ ನಾನು ವಾಸಿಸಬಲ್ಲೆ. | |
| ನಾನು ಹಗಲೆಲ್ಲಾ ನಿದ್ರಿಸುತ್ತೇನೆ. ರಾತ್ರಿಯಲ್ಲಿ ಹಾರಾಡುತ್ತೇನೆ. ಮರದಲ್ಲಿ ತಲೆಕೆಳಗಾಗಿ ನೇತಾಡುತ್ತೇನೆ. | |

## ಬರೆಯಿರಿ

ಕೊಟ್ಟಿರುವ ಹೇಳಿಕೆಗಳು ಸರಿಯಾಗಿದ್ದರೆ 'ಸರಿ' ಎಂದೂ ತಪ್ಪಾಗಿದ್ದರೆ 'ತಪ್ಪು' ಎಂದೂ ಬರೆಯಿರಿ. ತಪ್ಪಾಗಿರುವ ಹೇಳಿಕೆಗಳನ್ನು ಸರಿಪಡಿಸಿ ಬರೆಯಿರಿ.

- ದನವು ಸಸ್ಯಾಹಾರಿ ಪ್ರಾಣಿಯಾಗಿದೆ. ______
- ನಾಯಿಯು ಒಂದು ಮಾಂಸಾಹಾರಿ ಪ್ರಾಣಿಯಾಗಿದೆ. ______
- ಕರಡಿಯು ಮಿಶ್ರಾಹಾರಿ ಪ್ರಾಣಿಯಾಗಿದೆ. ______

## ಬರೆಯಿರಿ

**ಕೋಣೆಗಳಲ್ಲಿರುವ ಜೀವಿಗಳ ಹೆಸರುಗಳನ್ನು ಹುಡುಕಿ ಬರೆಯಿರಿ.**

| | | | | | | | |
|---|---|---|---|---|---|---|---|
| ಇ | ಆ | ನೆ | ಹಂ | ದಿ | ಅ | ತಿ | ಮೊ |
| ರು | ಡು | ಪ | ದ | ಗಿ | ಳಿ | ಗ | ಲ |
| ವೆ | ಕೋ | ಳಿ | ನ | ವಿ | ಲು | ಣೆ | ಬೆ |
| ಗ | ತಿ | ಪಾ | ರಿ | ವಾ | ಳ | ಹಾ | ಕ್ಕು |
| ಜಿ | ರಾ | ಫೆ | ಒಂ | ಟೆ | ನೊ | ವು | ಹ |
| ಚಿ | ಟ್ಟೆ | ಗೂ | ಬೆ | ಸ | ಣ | ರಾ | ಲ್ಲಿ |

## ಬರೆಯಿರಿ

**ನೀವು ಪಟ್ಟಿ ಮಾಡಿದ ಜೀವಿಗಳನ್ನು ಪ್ರಾಣಿಗಳು, ಪಕ್ಷಿಗಳು ಮತ್ತು ಕೀಟಗಳು ಎಂದು ವರ್ಗೀಕರಿಸಿ ಬರೆಯಿರಿ.**

| ಪ್ರಾಣಿಗಳು | ಪಕ್ಷಿಗಳು | ಕೀಟಗಳು |
|---|---|---|
| | | |

## ಓದಿರಿ

ಕೋಳಿಯು ಪಕ್ಷಿ ಜಾತಿಗೆ ಸೇರಿದ ಜೀವಿಯಾಗಿದೆ. ಕೋಳಿ ಪಕ್ಷಿಯಾಗಿದ್ದರೂ ಅದಕ್ಕೆ ತುಂಬಾ ದೂರ ಹಾರಿಕೊಂಡು ಹೋಗಲು ಸಾಧ್ಯವಿಲ್ಲ. ಜಗತ್ತಿನ ಪಕ್ಷಿಗಳಲ್ಲಿ ಕೋಳಿಗಳ ಸಂಖ್ಯೆ ಅತಿ ಹೆಚ್ಚು. ಕೋಳಿ ಮಿಶ್ರಾಹಾರಿ ಜೀವಿಯಾಗಿದೆ. ಬೀಜಗಳು, ಧಾನ್ಯಗಳು, ಕೀಟಗಳು, ಹುಳುಹುಪ್ಪಟೆಗಳು ಕೋಳಿಗಳ ಆಹಾರ. ಕೋಳಿಯನ್ನು ಮಾಂಸಕ್ಕಾಗಿ ಮತ್ತು ಮೊಟ್ಟೆಗಾಗಿ ಸಾಕುತ್ತಾರೆ. ಗಂಡುಕೋಳಿಯನ್ನು ಹುಂಜ ಎಂದೂ ಹೆಣ್ಣು ಕೋಳಿಯನ್ನು ಹೇಂಟೆ ಎಂದೂ ಕರೆಯುತ್ತಾರೆ.



## ಬರೆಯಿರಿ

ನಿಮಗೆ ಇಷ್ಟವಿರುವ ಯಾವುದಾದರೂ ಒಂದು ಪ್ರಾಣಿ ಅಥವಾ ಪಕ್ಷಿಯ ಬಗ್ಗೆ ವಿವರಣೆಯನ್ನು ಬರೆಯಿರಿ.

## ಬರೆಯಿರಿ


**ಕೆಳಗೆ ಕೊಟ್ಟಿರುವ ಜೀವಿಗಳಲ್ಲಿ ಮೊಟ್ಟೆ ಇಡುವವುಗಳ ಚಿತ್ರದ ಕೆಳಗೆ ಮೊಟ್ಟೆಯ ಚಿತ್ರ ಬಿಡಿಸಿರಿ.**















ಚಂಪಕವನದಲ್ಲಿ ಸಂಭ್ರಮವೇ ಸಂಭ್ರಮ. ಸಂಗೀತದ ಸಭೆಗೆ ವೇದಿಕೆಯನ್ನು ಸಿದ್ಧಗೊಳಿಸಲಾಗಿತ್ತು. ಸಭಾಂಗಣವನ್ನು ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು. ವೇದಿಕೆಯಲ್ಲಿ ವಾದ್ಯೋಪಕರಣಗಳನ್ನು ಇರಿಸಲಾಗಿತ್ತು. ಸಭೆಯಲ್ಲಿ ಎಲ್ಲಾ ಪ್ರಾಣಿಗಳು ಸೇರಿದ್ದವು.



# ಸಂಗೀತದ ಸಭೆ

ನರಿಯಣ್ಣನ ಸಂಗೀತದ ಸಭೆಯಲಿ
ಮಂಗನು ಮದ್ದಳೆ ಬಾರಿಸಿದ
ಬೆಕ್ಕಿನ ಪಿಟೀಲು ಕರಡಿಯ ವಾಲಗ
ಚುಂ ಚುಂ ಅಳಿಲಿನ ಕೈತಾಳ

ನವಿಲಿನ ನಾಟ್ಯಕೆ ಕೋಗಿಲೆ ಹಾಡಿತು
ಹಂದಿಯು ನುಡಿಸಿತು ಘಟವಾದ್ಯ
ಇಲಿಗಳು ಮೊಲಗಳು ಎಲ್ಲವು ಬಂದವು
ಆಹಾ! ನೋಡಲು ಬಲು ಚಂದ



ಗದ್ದಲ ಕೇಳುತ ಅಲ್ಲಿಗೆ ಬಂದನು
ಎಲ್ಲೋ ಅಡಗಿದ ಹುಲಿರಾಯ
ನಿಂತಿತು ಹಾಡು ನಿಂತಿತು ಮದ್ದಳೆ
ಮುಗಿಯಿತು ಸಂಗೀತದ ನಾಟ್ಯ

ಎತ್ತಿದ ಬಾಲದಿ ನಾಗಾಲೋಟದಿ
ಓಡಿದವೆಲ್ಲವು ಅಲ್ಲಲ್ಲಿ
ಮದ್ದಳೆ ಪಿಟೀಲು ತಾಳಗಳಷ್ಟೆ
ಬಿದ್ದಿದ್ದುವು ಚೆಲ್ಲಾಪಿಲ್ಲಿ

– ವೆಂಕಟರಾಜ ಪುಣಿಂಚಿತ್ತಾಯ



## ಹಾಡಿರಿ

ಈ ಪದ್ಯವನ್ನು ರಾಗವಾಗಿ ಹಾಡಿರಿ.



## ಉತ್ತರಿಸಿರಿ

- ನರಿಯಣ್ಣನ ಸಂಗೀತದ ಸಭೆಯಲ್ಲಿ ಮದ್ದಳೆ ಬಾರಿಸಿದ್ದು ಯಾರು?
- ಸಂಗೀತದ ಸಭೆಯಲ್ಲಿ ಹಂದಿಯು ಏನನ್ನು ನುಡಿಸಿತು?
- ಪ್ರಾಣಿಗಳು ಓಡಿ ಹೋಗಲು ಕಾರಣವೇನು?

## ಬರೆಯಿರಿ

**ಪದಗಳನ್ನು ಅನುಕ್ರಮವಾಗಿ ಬರೆದು ವಾಕ್ಯ ರಚಿಸಿರಿ.**

- ಬಾರಿಸಿದ / ಮಂಗನು / ಮದ್ದಳೆ.
- ಅಲಂಕರಿಸಲಾಗಿತ್ತು / ತಳಿರು ತೋರಣಗಳಿಂದ / ಸಭಾಂಗಣವನ್ನು.
- ವೇದಿಕೆಯನ್ನು / ಸಭೆಗೆ / ಸಿದ್ಧಗೊಳಿಸಲಾಗಿತ್ತು / ಸಂಗೀತದ

## ಬರೆಯಿರಿ

**ಪದ್ಯದ ಸಾಲುಗಳನ್ನು ಮುಂದುವರಿಸಿ ಬರೆಯಿರಿ.**

ದನವೇ ದನವೇ ಊರಿನ ದನವೇ
ತಿನ್ನುವೆ ಏನನ್ನು?
ಪ್ರೀತಿಯ ಮಕ್ಕಳೆ ಮುದ್ದಿನ ಚಿಣ್ಣರೆ
ತಿನ್ನುವೆ ಹುಲ್ಲನ್ನು
ಬೆಕ್ಕೇ ಬೆಕ್ಕೇ ಮುದ್ದಿನ ಬೆಕ್ಕೇ

____________________

____________________

____________________


## ಓದಿರಿ



ಹುಲಿರಾಯ ಬಂದಾಗ
ನನಗೆ ಗಾಬರಿಯಾಯಿತು.
ನಾನು ಬೇಗ ಹಾರಿ
ತಪ್ಪಿಸಿಕೊಂಡೆ.



ನಾನು ಹುಲಿರಾಯನನ್ನು
ಕಂಡಾಗ ನೆಗೆದು ಓಡಿ ಹೋದೆ.
ಸಿಕ್ಕಿ ಬೀಳಲೇ ಇಲ್ಲ.



ನಾನು ಹರಿದಾಡುತ್ತಾ ಹೋಗಿ ಬಿಲವನ್ನು
ಸೇರಿಕೊಂಡೆ.

**ಬರೆಯಿರಿ.**

ನಿಮಗೆ ತಿಳಿದಿರುವ ಜೀವಿಗಳನ್ನು ನಡೆದಾಡುವವುಗಳು, ಹರಿದಾಡುವವುಗಳು ಹಾಗೂ ಹಾರುವವುಗಳು ಎಂದು ವರ್ಗೀಕರಿಸಿ ಬರೆಯಿರಿ.

| ನಡೆದಾಡುವವುಗಳು | ಹಾರುವವುಗಳು | ಹರಿದಾಡುವವುಗಳು |
|---|---|---|
| | | |

ಕಪ್ಪೆ ತಯಾರಿಸಿರಿ.

**ಬೇಕಾದ ವಸ್ತುಗಳು :**


ಕಾಗದದ ಲೋಟ, ಕಾರ್ಡು ಕಾಗದ, ಸ್ಕೆಚ್‌ಪೆನ್, ಬಣ್ಣಗಳು, ಕತ್ತರಿ.




ಕಪ್ಪೆಯ ಚಿತ್ರವನ್ನು ಕಾರ್ಡಿನಲ್ಲಿ ಚಿತ್ರಿಸಿ ಕತ್ತರಿಸಿರಿ.



ಕಾರ್ಡ್ ಕಾಗದದ ಆಕೃತಿಗಳಿಗೆ ಬಣ್ಣ ಕೊಡಿ. ಇವು ಕಪ್ಪೆಯ ತಲೆ ಮತ್ತು ಕಾಲುಗಳು.




ಲೋಟದ ಮೇಲೆ ಕಪ್ಪೆಯ ಹೊಟ್ಟೆ ಮತ್ತು ಮುಂಗಾಲುಗಳನ್ನು ಚಿತ್ರಿಸಿ ಬಣ್ಣ ಹಚ್ಚಿರಿ.



ಕಾಗದದ ಲೋಟೆಯ ಮೇಲೆ ಕಪ್ಪೆಯ ತಲೆ ಬರುವಂತೆ ಇರಿಸಿ ಹಿಂದಿನಿಂದ ಗಮ್‌ಟೇಪ್‌ನಲ್ಲಿ ಅಂಟಿಸಿರಿ.



ಹಿಂಭಾಗದಲ್ಲಿ ಕಪ್ಪೆಯ ಕಾಲುಗಳನ್ನು ಅಂಟಿಸಿರಿ.




ಹಾಡಿರಿ

# ಒಗ್ಗಟ್ಟಿನ ಬಲ

ಹಕ್ಕಿಗಳನು ಬೇಟೆಯಾಡಿ
ಹಿಡಿಯಲೆಂದು ಬೇಡನೊಬ್ಬ
ಕೋವಿ ಬಲೆಯ ಹಿಡಿದುಕೊಂಡು
ಮುಂದೆ ಸಾಗಿದ

ಬಯಲ ಬದಿಯ ಮರದ ಕೆಳಗೆ
ಬಲೆಯ ಹರಡಿ ಬೇಡನಾಗ
ಕಾಳು ಚೆಲ್ಲಿ ಹಕ್ಕಿಗಳಿಗೆ
ಹೊಂಚು ಹಾಕಿದ

ಸುತ್ತಮುತ್ತ ಕಾಳುಗಳನು
ಹುಡುಕುತಿದ್ದ ಹಕ್ಕಿ ಬಳಗ
ಮರದ ಕೆಳಗೆ ಕಾಳು ಕಂಡು
ಮುದದಿ ಕುಳಿತವು



ಕಾಳುಗಳನು ತಿನ್ನಲೆಂದು
ಬಲೆಯ ಮೇಲೆ ಹಾರಿ ಕುಳಿತ
ಹಕ್ಕಿ ಬಳಗ ಸಿಕ್ಕಿ ಬಿದ್ದು
ಹಾರದಾದವು

ಹಿರಿಯ ಹಕ್ಕಿ ಧೈರ್ಯದಿಂದ
ಹೇಳಿತೊಂದು ಮಾತನಾಗ
ಬಲೆಯನೆತ್ತಿಕೊಂಡು ನಾವು
ಹಾರಿಹೋಗುವ

ಐಕ್ಯದಿಂದ ಹಕ್ಕಿ ಬಳಗ
ಬಲೆಯನೆತ್ತಿ ಹಾರುತಿರಲು
ಬೆರಗುಗೊಂಡ ಬೇಡ ತನ್ನ
ದಾರಿ ಹಿಡಿದನು.

# ಕಲಿಕಾ ಸಾಧನೆಗಳು

## ಕನ್ನಡ

1. ಆಲಿಸಿದ ವಿಚಾರಗಳ ಕುರಿತು ಬರೆಯುವುದು.
2. ಆಶಯಗಳನ್ನು ಮುಂದುವರಿಸಿಕೊಂಡು ಸಂದರ್ಭಕ್ಕನುಗುಣವಾಗಿ ಸಂಭಾಷಣೆ ನಡೆಸುವುದು.
3. ಚಿತ್ರಕಥೆಯನ್ನು ನಿರೀಕ್ಷಣೆ ಮಾಡಿ ಆಶಯಗಳನ್ನು ಕ್ರಮೀಕರಿಸಿ ಕಥೆ ಹೇಳುವುದು.
4. ಶಿಶುಗೀತೆಗಳನ್ನು ರಾಗ, ತಾಳಗಳೊಂದಿಗೆ ಹಾಡುವುದು.
5. ಸರಳ ಒಗಟುಗಳ ಉತ್ತರಗಳನ್ನು ಕಂಡುಹಿಡಿದು ಸರಳವಾದ ಹೊಸ ಒಗಟುಗಳನ್ನು ರಚಿಸುವುದು.
6. ಆಶಯವನ್ನು ಅರ್ಥೈಸಿ ಅಕ್ಷರ ಸ್ಫುಟತೆ, ಉಚ್ಚಾರ ಸ್ಪಷ್ಟತೆಯಿಂದ ಓದುವುದು.
7. ತನ್ನ ಆಶಯವನ್ನು ಉಪಯೋಗಿಸಿ ವಿಭಿನ್ನ ಭಾಷಾ ವ್ಯವಹಾರ ರೂಪಗಳನ್ನು ತಯಾರಿಸಿ ಸಂಚಿಕೆಗಳಲ್ಲಿ ಪ್ರಕಟಿಸುವುದು.

## ಪರಿಸರ


1. ನಮ್ಮ ಸುತ್ತುಮುತ್ತಲೂ ಹಲವು ಜೀವಿಗಳಿವೆ.
2. ಜೀವಿಗಳ ಸಂಚಾರ ರೀತಿಯಲ್ಲಿ ವ್ಯತ್ಯಾಸವಿದೆ.
3. ಮೊಟ್ಟೆಯಿಡುವ ಹಾಗೂ ಮರಿ ಇಡುವ ಜೀವಿಗಳಿವೆ.
4. ನಮ್ಮ ಸುತ್ತುಮುತ್ತಲೂ ವಿವಿಧ ರೀತಿಯ ಪಕ್ಷಿಗಳಿವೆ.
5. ಜೀವಿಗಳ ಆಹಾರ ರೀತಿಯಲ್ಲಿ ವೈವಿಧ್ಯವಿದೆ.
6. ಜೀವಿಗಳಿಗೆ ಶಾರೀರಿಕವಾಗಿ ಪ್ರತ್ಯೇಕತೆಗಳಿವೆ.
7. ಕಾಡಿನಲ್ಲೂ ನಾಡಿನಲ್ಲೂ ವಾಸಿಸುವ ಜೀವಿಗಳಿವೆ.

ಪಾಠ - 6

# ಜೀವಜಲ

ನಂದನ ಕೆರೆಯಲ್ಲಿ ಚಿಂಪು ಮೀನು, ಚಿಣ್ಣಿ ಕಪ್ಪೆ, ಆಮೆ, ಏಡಿ ಮೊದಲಾದ ಜೀವಿಗಳು ತಮ್ಮ ಮರಿಗಳೊಂದಿಗೆ ಅನ್ಯೋನ್ಯವಾಗಿ ಜೀವಿಸುತ್ತಿದ್ದವು. ಬೇಸಗೆ ಕಾಲ ಬಂತು. ಮಳೆ ಇಲ್ಲದೆ ಆ ಕೆರೆ ಒಣಗಿ ಹೋಗುವ ಸ್ಥಿತಿಗೆ ಬಂತು. ಚಿಂಪು ಮೀನು ನೀರಿನ ಮೇಲೆ ಬಂದು ಬಾನಿನತ್ತ ನೋಡಿತು. ಕಪ್ಪು ಮೋಡವೊಂದು ಅತ್ತಿತ್ತ ಓಲಾಡುವುದು ಕಂಡಿತು. ಚಿಂಪು ಮೀನು ಗಾಳಿಯಣ್ಣನ ಬಳಿಗೆ ಹೋಯಿತು.





# ಮೋಡದ ಸದ್ಗುಣ

**ಚಿಂಪು** : ಗಾಳಿಯಣ್ಣ... ಗಾಳಿಯಣ್ಣ..

**ಗಾಳಿಯಣ್ಣ** : ಯಾರದು ಕರೆಯುತ್ತಿರುವುದು?


**ಚಿಂಪು** : ನಾನು, ಚಿಂಪು.

**ಗಾಳಿಯಣ್ಣ** : ಏನು ಚಿಂಪೂ?

**ಚಿಂಪು** : ಮಳೆ ಇಲ್ಲದೆ ನಮ್ಮ ಕೆರೆ ಬತ್ತಿ ಹೋಗುತ್ತಿದೆ. ಬಾನಿನಲ್ಲಿರುವ ಮೋಡದಲ್ಲಿ ಈ ಕೆರೆ ತುಂಬುವಷ್ಟು ನೀರಿದೆ. ಅದನ್ನು ಇಲ್ಲಿ ಮಳೆಯಾಗಿ ಸುರಿಸಲು ಹೇಳುವೆಯಾ?

**ಗಾಳಿಯಣ್ಣ** : ಆಗಲಿ. ನನ್ನ ಗೆಳೆಯ ಮೋಡಣ್ಣನಲ್ಲಿ ಹೇಳುತ್ತೇನೆ. ಮೋಡಣ್ಣಾ.... ಮೋಡಣ್ಣಾ.....

**ಮೋಡಣ್ಣ** : ಏನು ಗಾಳಿಯಣ್ಣ, ಇಲ್ಲಿಯ ತನಕ ಬಂದೆ ?





ಗಾಳಿಯಣ್ಣ : ಮೋಡಣ್ಣ ಅಲ್ಲಿ ನೋಡು. ಆ ಕೆರೆ ನೀರಿಲ್ಲದೆ ಬತ್ತುತ್ತಾ ಇದೆ. ನಿನ್ನಲ್ಲಿರುವ ಎಲ್ಲ ನೀರನ್ನು ಸುರಿಸಿದರೆ ಅಲ್ಲಿರುವ ಜೀವಿಗಳು ಬದುಕಬಹುದು. ಅದು ಬಿಟ್ಟು ಗುಡ್ಡದ ಮೇಲೋ ಬಂಡೆಕಲ್ಲಿನ ಮೇಲೋ ಸುರಿದರೆ ಅದು ವ್ಯರ್ಥ. ದಯವಿಟ್ಟು ಆ ಕೆರೆಯಲ್ಲಿರುವ ನನ್ನ ಗೆಳೆಯರ ಪ್ರಾಣ ಉಳಿಸು.

ಮೋಡಣ್ಣ : ಗಾಳಿಯಣ್ಣ, ನಿನ್ನ ಗೆಳೆಯರ ಕಷ್ಟ ನನಗೆ ಅರ್ಥವಾಗುತ್ತದೆ. ಕಲ್ಲುಬಂಡೆಗೆ ನೀರು ಎರೆದರೆ ಅದು ವ್ಯರ್ಥ ಎಂದೆಯಲ್ಲ. ಅದು ಸರಿಯಲ್ಲ. ಅಲ್ಲಿಯೂ ಒಂದಿಷ್ಟು ಮಳೆ ಹನಿಸುತ್ತೇನೆ, ನೋಡುತ್ತಿರು.

ಹುಲ್ಲಿನ ಬೀಜ : ಹಾಯ್, ಮಳೆ ನೀರು! ಮೋಡಣ್ಣ, ಒಂದಿಷ್ಟು ನೀರು ಕೊಟ್ಟುದಕ್ಕಾಗಿ ಕೃತಜ್ಞತೆಗಳು. ಇನ್ನಷ್ಟು ನೀರು ಸುರಿಸು. ನಾನು ಬೀಜದಿಂದ ಹೊರ ಬಂದು ಬದುಕಿಕೊಳ್ಳುತ್ತೇನೆ.

ಮೋಡಣ್ಣ : ನೋಡಿದೆಯಾ ಗಾಳಿಯಣ್ಣ, ಆ ಬಂಡೆಕಲ್ಲಿನ ಕೆಳಗೂ ಜೀವವಿದೆ.





ಗಾಳಿಯಣ್ಣ : ಹಾಗಾದರೆ ಆ ಗುಡ್ಡದ ಮೇಲೆ ಯಾಕೆ ನೀರು ಸುರಿಸಿರುವೆ?

ಮೋಡಣ್ಣ : ಅಲ್ಲಿ ಮಳೆ ಸುರಿಸಿದರೆ ಏನಾಗುವುದೆಂದು ನೋಡು.

ಡಿಂಕು ಕಪ್ಪೆ : ಟ್ರೋಂ... ಟ್ರೋಂ.... ಟ್ರೋಂ.... ಮಳೆರಾಯಾ, ನಿನಗೆ ತುಂಬ ಧನ್ಯವಾದಗಳು. ಎಷ್ಟೋ ಸಮಯದಿಂದ ನೀರಿಲ್ಲದೆ ಕಂಗೆಟ್ಟಿದ್ದೆ. ನಿನ್ನ ಕರುಣೆಗಾಗಿ ಕಾಯುತ್ತಿದ್ದೆ.

ಮೋಡಣ್ಣ : ನೋಡು ಗಾಳಿಯಣ್ಣ, ಜಗತ್ತಿನಲ್ಲಿ ಯಾವ ಕೆಲಸವೂ ವ್ಯರ್ಥವಲ್ಲ. ನೀನು ಹೇಳಿದಂತೆ ನನ್ನಲ್ಲಿರುವ ನೀರನ್ನೆಲ್ಲ ಕೆರೆಗೆ ಸುರಿಯುತ್ತಿದ್ದರೆ ಮೀನುಗಳು ಮತ್ತು ಜಲಚರಗಳು ಮಾತ್ರ ಬದುಕುತ್ತಿದ್ದವು. ಬಂಡೆಕಲ್ಲಿನಲ್ಲೂ ಗುಡ್ಡದ ತುದಿಯಲ್ಲೂ ಜೀವವಿದೆ. ಗುಡ್ಡದಲ್ಲಿ ಬಿದ್ದ ನೀರು ಹರಿದು ಕೆರೆಯನ್ನು ಸೇರುವುದನ್ನು ನೋಡು. ಭೂಮಿಯಲ್ಲಿ ಎಲ್ಲರಿಗೂ ಬದುಕಲು ಅವಕಾಶವಿದೆ.

ಗಾಳಿಯಣ್ಣ : ನೀನು ಹೇಳುವುದು ಸರಿ ಮೋಡಣ್ಣ. ಎಲ್ಲ ಜೀವಜಾಲಗಳಿಗೂ ಬದುಕಲು ನೀರು ಬೇಕೇ ಬೇಕು. ಈಗ ನಿನ್ನಲ್ಲಿ ಉಳಿದ ನೀರನ್ನು ಆ ಕೆರೆಯ ಮೇಲೆ ಸುರಿಸು.

ಮೊಡಣ್ಣ : ಸರಿ,ಹಾಗೆಯೇ ಮಾಡುತ್ತೇನೆ.

## ಉತ್ತರಿಸಿ

- ಕೆರೆಯ ನೀರು ಯಾಕೆ ಬತ್ತಿಹೋಯಿತು?
- ಬಂಡೆಕಲ್ಲಿನ ಮೇಲೆ ಮಳೆ ಸುರಿದಾಗ ಏನಾಯಿತು?
- ಜೀವಿಗಳಿಗೆ ನೀರು ಯಾಕೆ ಬೇಕು ?

## ಬರೆಯಿರಿ

**ಸಂಭಾಷಣೆಯನ್ನು ಪೂರ್ತಿಗೊಳಿಸಿರಿ.**

ಚಿಂಟು: ಅಮ್ಮಾ...ಅಮ್ಮಾ....

ಚಿಂಪು : ಏನು ಚಿಂಟೂ ?

ಚಿಂಟು : ______________________________

ಚಿಂಪು : ______________________________?

ಚಿಂಟು : ಇಲ್ಲಿ ಆಟ ಆಡಲು ನೀರಿಲ್ಲ.

ಚಿಂಪು : ನೋಡು ಚಿಂಟೂ, ಇನ್ನು ಕೆಲವು ದಿನಗಳಲ್ಲಿ ಮಳೆ ಬರಬಹುದು.

ಚಿಂಟು : ______________________________

ಚಿಂಪು : ______________________________

ಚಿಂಟು : ______________________________

## ಅಭಿನಯಿಸಿರಿ

**ಈ ಸಂಭಾಷಣೆಯಲ್ಲಿ ಬರುವ ಪಾತ್ರಗಳನ್ನು ಅಭಿನಯಿಸಿರಿ.**




**ಮಾದರಿಯಂತೆ ವಾಕ್ಯ ಬರೆಯಿರಿ**

**ಉದಾ :** ಮೋಡಣ್ಣ ನೀರನ್ನು ಸುರಿಸಿದನು. ಆಗ ಕೆರೆಯಲ್ಲಿರುವ ಜೀವಿಗಳು ಬದುಕಿದವು.

ಮೋಡಣ್ಣ ನೀರನ್ನು ಸುರಿಸಿದಾಗ ಕೆರೆಯಲ್ಲಿರುವ ಜೀವಿಗಳು ಬದುಕಿದವು.

- ಪ್ರಿಯಾಂಕ ಗಿಡಗಳಿಗೆ ನೀರನ್ನು ಎರೆದಳು. ಆಗ ಅವುಗಳು ಚೆನ್ನಾಗಿ ಬೆಳೆದವು.
- ಮೋಡಣ್ಣ ನೀರನ್ನು ಸುರಿಸಿದನು. ಆಗ ಕೆರೆ ಬಾವಿಗಳು ತುಂಬಿದವು.
- ಮಳೆ ಸುರಿಯಿತು. ಆಗ ಜೀವಿಗಳಿಗೆ ಸಂತಸವಾಯಿತು.
- ಜೋರಾಗಿ ಮಳೆ ಸುರಿಯಿತು. ಆಗ ಮಕ್ಕಳು ಕೊಡೆ ಬಿಡಿಸಿದರು.




**ಅಡಿಗೆರೆ ಎಳೆದ ಪದದ ಸರಿಯಾದ ರೂಪವನ್ನು ಪಾಠಪುಸ್ತಕದಿಂದ ಹುಡುಕಿ, ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ.**

**ಉದಾ :** ನಾನು ಎಷ್ಟೋ ಸಮಯದಿಂದ ನೀರು ಕಂಗೆಟ್ಟಿದ್ದೆ.

ನಾನು ಎಷ್ಟೋ ಸಮಯದಿಂದ ನೀರಿಲ್ಲದೆ ಕಂಗೆಟ್ಟಿದ್ದೆ.

- ಎಲ್ಲರಿಗೂ ಭೂಮಿ ಬದುಕಲು ಅವಕಾಶವಿದೆ.
- ದಯವಿಟ್ಟು ಆ ಕೆರೆ ನನ್ನ ಗೆಳೆಯರ ಪ್ರಾಣ ಉಳಿಸು.




**ಕೆಳಗೆ ಕೊಟ್ಟಿರುವ ಕೋಣೆಯಲ್ಲಿ ಕೆಲವು ಜೀವಿಗಳ ಹೆಸರುಗಳು ಅಡಗಿವೆ. ಅವುಗಳನ್ನು ಗುರುತಿಸಿ ನೀರಿನಲ್ಲಿ ವಾಸಿಸುವವುಗಳಿಗೆ ನೀಲಿ ಬಣ್ಣವನ್ನೂ, ನೆಲದಲ್ಲಿ ವಾಸಿಸುವವುಗಳಿಗೆ ಹಸಿರು ಬಣ್ಣವನ್ನೂ ಕೊಡಿರಿ.**

| | | | | | | |
|---|---|---|---|---|---|---|
| ಮೀ | ಇ | ಲಿ | ತಿ | ಮಿಂ | ಗಿ | ಲ |
| ನು | ರು | ನ | ಆ | ಡು | ಲಿ | ಈ |
| ದ | ನ | ಏ | ವೃ | ಪ | ಮೊ | ಆ |
| ದಿ | ನ | ಕ | ಬೆ | ಕ್ಕು | ಸ | ಮೆ |
| ಏ | ಮು | ರ | ರಿ | ಸ | ಳೆ | ರಿ |
| ಡಿ | ಳೆ | ತ | ತಾ | ನಾ | ಮೊ | ಕೋ |
| ಗ | ಕ | ಪ್ಪೆ | ಕಾ | ಯಿ | ಕೆ | ಳಿ |

**ಸಿಕ್ಕಿದ ಜೀವಿಗಳ ಹೆಸರನ್ನು ಕೆಳಗೆ ಕೊಟ್ಟಿರುವ ಕೋಣೆಯಲ್ಲಿ ಬರೆಯಿರಿ.**

| ನೀರಿನಲ್ಲಿ ವಾಸಿಸುವವುಗಳು | ನೆಲದಲ್ಲಿ ವಾಸಿಸುವವುಗಳು |
|---|---|
| | |

# ನಿಲ್ಲು ಮೋಡ



ನಿಲ್ಲು ಮೋಡ ಓಡಬೇಡ
ಯಾಕೆ ಇಷ್ಟು ಅವಸರ ?
ಗಾಳಿಯೊಡನೆ ಕೂಡಿಕೊಂಡು
ಎಲ್ಲಿ ನಡೆವೆ ಭರಭರ ?

ಹಳ್ಳ ಕೊಳ್ಳ ಕೆರೆಗಳಲ್ಲಿ
ನೀರು ಬತ್ತಿ ಹೋಗಿದೆ
ತೋಟ ಗದ್ದೆ ಹೊಲಗಳಲ್ಲಿ
ಪೈರು ಒಣಗಿ ನಿಂತಿದೆ

ನೀರು ನೀರು ನೀರು ಎಂದು
ಕೊರಗುತಿಹವು ಗಿಡಮರ
ಮೂಕ ಪ್ರಾಣಿಪಕ್ಷಿ ಬಗೆಗೆ
ನಿನಗೆ ಇಲ್ಲ ಕನಿಕರ

ಯಾರೊ ಕಾಡು ಕಡಿದರೆಂದು
ಮುನಿದೆಯೇನು ಮನದಲಿ ?
ನೀನೆ ದೂರವಾದ ಮೇಲೆ
ಕಾಯ್ವರಾರು ಜಗದಲಿ

ಕೋಪ ತಾಪಗಳನು ತೊರೆದು
ಮಳೆಯ ಸುರಿಸು ಬುವಿಯಲಿ
ರೈತ ಜನರ ಮುಖದ ಮೇಲೆ
ನಗೆಯ ಬುಗ್ಗೆ ಚಿಮ್ಮಲಿ

**– ಜಂಬುನಾಥ ಕಂಚ್ಯಾಣಿ**



## ಹಾಡಿರಿ

**ಈ ಪದ್ಯವನ್ನು ರಾಗವಾಗಿ ಹಾಡಿರಿ.**

## ಉತ್ತರಿಸಿರಿ

- ಮೋಡವು ಯಾರ ಜೊತೆಯಲ್ಲಿ ನಡೆಯುತ್ತದೆ?
- ನೀರು ಎಲ್ಲೆಲ್ಲಿ ಬತ್ತಿಹೋಗಿದೆ?
- ತೋಟ ಗದ್ದೆ ಹೊಲಗಳಲ್ಲಿ ಪೈರು ಯಾಕೆ ಒಣಗಿವೆ?
- ಗಿಡಮರಗಳು ಏನೆಂದು ಕೊರಗುತ್ತಿವೆ?
- ಮೋಡಕ್ಕೆ ಯಾರ ಬಗ್ಗೆ ಕನಿಕರ ಇಲ್ಲ?
- ಮೋಡಕ್ಕೆ ಯಾಕೆ ಸಿಟ್ಟು ಬಂದಿದೆ?


## ಬರೆಯಿರಿ

**ಸೂಕ್ತವಾಗಿ ಜೊತೆಗೊಳಿಸಿ ಬರೆಯಿರಿ.**

| | |
|---|---|
| ಯಾಕೆ ಇಷ್ಟು | ಜಗದಲಿ |
| ಕೊರಗುತಿಹವು | ಚಿಮ್ಮಲಿ |
| ಮಳೆಯ ಸುರಿಸು | ಭರಭರ |
| ನಗೆಯ ಬುಗ್ಗೆ | ಗಿಡಮರ |
| ಕಾಯ್ದಿರಾರು | ಅವಸರ |
| ಎಲ್ಲಿ ನಡೆವೆ | ಬುವಿಯಲಿ |



ಮೋಡಣ್ಣ ಮಳೆ ಸುರಿಸಲು ಪ್ರಾರಂಭಿಸಿದನು. ಕೆರೆ, ಬಾವಿ, ಹಳ್ಳ, ಕೊಳಗಳು ನೀರಿನಿಂದ ತುಂಬಿದವು. ಜೀವಿಗಳಿಗೆ ಸಂತೋಷವಾಯಿತು. ಕಪ್ಪೆ ಮರಿಗಳು "ಅಮ್ಮಾ, ಇಲ್ಲಿ ಮಾತ್ರ ನೀರು ಇರುವುದೆ?" ಎಂದು ಕೇಳಿದವು. "ಅಲ್ಲ. ಬೇರೆ ಕಡೆಗಳಲ್ಲೂ ನೀರಿದೆ. ಬನ್ನಿ ನಾನು ತೋರಿಸುತ್ತೇನೆ" ಎನ್ನುತ್ತಾ ಚಿಣ್ಣಿ ಕಪ್ಪೆ ತನ್ನ ಮರಿಗಳನ್ನು ಕರೆದುಕೊಂಡು ಕೆರೆಯಿಂದ ಹೊರಟಿತು. ಅವು ಹಳ್ಳ, ತೋಡು, ಹೊಳೆಗಳನ್ನು ದಾಟಿ ಕಡಲಿನ ಬದಿಗೆ ತಲುಪಿದವು. ಅಬ್ಬಾ ಎಷ್ಟೊಂದು ನೀರು! ಕಪ್ಪೆ ಮರಿಗಳಿಗೆ ಆಶ್ಚರ್ಯವಾಯಿತು.



# ಕಡಲಿನ ನೋಟ

ಕೆರೆ, ಬಾವಿ, ಹೊಳೆಗಳನ್ನು ನೀವು ನೋಡಿರುವಿರಲ್ಲವೆ? ಸಮುದ್ರವನ್ನು ಎಂದಾದರೂ ನೋಡಿರುವಿರಾ? ಅಬ್ಬಬ್ಬಾ, ಎಷ್ಟೊಂದು ನೀರು! ಅದರ ಬದಿಯಲ್ಲಿರುವ ಮರಳಿನ ರಾಶಿ! ಅದರ ಮೇಲೆ ಕುಳಿತು ಆಡಬೇಕೆಂದು ಅನಿಸುವುದಿಲ್ಲವೆ?

ಕಡಲಿನ ತೀರದಲ್ಲಿ ಕುಳಿತರೆ ಸುಂದರವಾದ ದೃಶ್ಯಗಳನ್ನು ಕಾಣಬಹುದು. ವಿಶಾಲವಾಗಿ ಹರಡಿರುವ ನೀರಿನ ರಾಶಿ ಬಾನಿಗೆ ತಾಗುವಂತಿದೆ. ಎಲ್ಲವೂ ನೀಲಮಯ. ಬಾನಿಗೂ ಕಡಲಿಗೂ ವ್ಯತ್ಯಾಸವೇ ಇಲ್ಲ. ಈ ಕಡಲಿನ ನೀರು ಎಂದೂ ಶಾಂತವಾಗಿರುವುದಿಲ್ಲ. ಒಂದರ ಮೇಲೊಂದು ತೆರೆಗಳು ಉಕ್ಕಿ ಉಕ್ಕಿ ಬರುತ್ತವೆ. ದೂರದಿಂದ ಜಿಗಿದು ಜಿಗಿದು ಬಂದು ದಡಕ್ಕೆ ಅಪ್ಪಳಿಸಿ ಹಿಂದಕ್ಕೆ ಮರಳುತ್ತವೆ. ಈ ತೆರೆಗಳನ್ನು ಎಣಿಸಲು ಸಾಧ್ಯವೇ ಇಲ್ಲ.

ಕಡಲ ತೀರದ ಮರಳಿನ ರಾಶಿಯ ಮೇಲೆ ಅತ್ತಿತ್ತ ಓಡಾಡುವ ಏಡಿಗಳು ಮತ್ತು ಆಮೆಗಳು, ಮೀನು ಹಿಡಿಯುವ ಬೆಸ್ತರು, ಮೀನಿಗಾಗಿ ಹಾರಾಡುವ ಹಕ್ಕಿಗಳು, ತೆರೆಗಳೊಂದಿಗೆ ಆಟವಾಡುವ ಜನರು, ನೀರಿನಲ್ಲಿ ತೇಲುವ ದೋಣಿಗಳು ಹೀಗೆ ಎಲ್ಲವೂ ಮನೋಹರ. ಸೂರ್ಯೋದಯ ಮತ್ತು ಸೂರ್ಯಾಸ್ತಮಾನದ ಸೊಬಗನ್ನು ಕಡಲ ತೀರದಲ್ಲಿ ಕಾಣಬಹುದು. ಕಡಲಿನ ನೀರನ್ನು ಕುಡಿಯಲು ಯಾರಿಗೂ ಸಾಧ್ಯವಿಲ್ಲ. ಯಾಕೆಂದರೆ ಇದು ಉಪ್ಪಾಗಿದೆ. ಕಡಲಿನಲ್ಲಿ ಆಮೆ, ಮೊಸಳೆ, ತಿಮಿಂಗಿಲ ಮತ್ತು ಕೆಲವು ಜಾತಿಯ ಮೀನುಗಳು ವಾಸಿಸುತ್ತವೆ.



## ಉತ್ತರಿಸಿರಿ

- ಕಡಲ ತೀರದಲ್ಲಿ ಏನೇನು ಕಾಣಬಹುದು ?
- ಕಡಲ ನೀರನ್ನು ಯಾಕೆ ಕುಡಿಯಲು ಸಾಧ್ಯವಿಲ್ಲ ?

## ಓದಿರಿ

- ಬಾನು - ಗಗನ - ಆಕಾಶ - ನಭ
- ನೀರು - ಜಲ - ಉದಕ - ವಾರಿ
- ಕಡಲು - ಸಮುದ್ರ - ಸಾಗರ - ಜಲಧಿ
- ಸೂರ್ಯ - ರವಿ - ಭಾನು - ಆದಿತ್ಯ
- ಮೋಡ - ಮುಗಿಲು - ಮೇಘ
- ಬುವಿ - ಭೂಮಿ - ಧರೆ - ಅವನಿ

## ಬರೆಯಿರಿ

**ಆವರಣದಲ್ಲಿ ಕೊಟ್ಟಿರುವ ಪದಗಳನ್ನು ಸೂಕ್ತವಾದ ಜಾಗದಲ್ಲಿ ಬರೆದು ಹೊಳೆಯ ಕುರಿತಾದ ಟಿಪ್ಪಣಿಯನ್ನು ಪೂರ್ತಿಗೊಳಿಸಿರಿ.**

**(ಕೆಂಪು, ಬತ್ತಿ, ಉದ್ದ, ಗಿಡಮರಗಳ, ಮೀನುಗಳು, ಉಕ್ಕಿ)**

ಹೊಳೆಯು _____ ವಾಗಿದೆ. ಹೊಳೆಯ ಎರಡೂ ಬದಿಗಳಲ್ಲಿ _____ ಸಾಲುಗಳು ಕಂಡುಬರುತ್ತವೆ. ಮಳೆಗಾಲದಲ್ಲಿ ಹೊಳೆಯು _____ ಹರಿಯುತ್ತದೆ. ಬೇಸಗೆಯಲ್ಲಿ ಅದು _____ ಹೋಗುತ್ತದೆ. ಮಳೆಗಾಲದಲ್ಲಿ ಹೊಳೆಯ ನೀರು ____ ಬಣ್ಣದಲ್ಲಿ ಇರುತ್ತದೆ. ಹೊಳೆಯಲ್ಲಿ _____ ವಾಸಿಸುತ್ತವೆ.




**ಕೆಳಗೆ ಕೊಟ್ಟಿರುವ ವಸ್ತುಗಳನ್ನು ನೀರಿಗೆ ಹಾಕಿದರೆ ಏನಾಗುತ್ತದೆ. ಅವುಗಳು ತೇಲುತ್ತವೆಯೋ ಮುಳುಗುತ್ತವೆಯೋ ಎಂದು ಊಹಿಸಿ ಕೋಣೆಯಲ್ಲಿ ಬರೆಯಿರಿ.**

**(ಪೆನ್ಸಿಲ್, ಕಡ್ಡಿ, ಕಲ್ಲು, ಎಲೆ, ನಾಣ್ಯ, ರಬ್ಬರ್, ಪ್ಲಾಸ್ಟಿಕ್ ಲಕೋಟೆ, ಖಾಲಿ ಪ್ಲಾಸ್ಟಿಕ್ ಬಾಟಲಿ, ನೀರು ತುಂಬಿದ ಪ್ಲಾಸ್ಟಿಕ್ ಬಾಟಲಿ, ಸೂಜಿ, ಚೆಂಡು, ಹೂ )**

**ನಾನು ಊಹಿಸಿದುದು**

| ತೇಲುವವುಗಳು | ಮುಳುಗುವವುಗಳು |
|---|---|
| | |

**ಒಂದು ಬಾಲ್ದಿಯಲ್ಲಿ ನೀರು ತೆಗೆದುಕೊಳ್ಳಿರಿ. ಮೇಲೆ ಕೊಟ್ಟಿರುವ ವಸ್ತುಗಳನ್ನು ನೀರಿಗೆ ಹಾಕಿ ಪರೀಕ್ಷಿಸಿ ನೋಡಿರಿ.**

**ಪರೀಕ್ಷಿಸಿ ನೋಡಿದಾಗ:**

| ತೇಲುವವುಗಳು | ಮುಳುಗುವವುಗಳು |
|---|---|
| | |

**ನಾನು ಕಂಡುಕೊಂಡದ್ದು:**

ಚಿಣ್ಣಿ ಕಪ್ಪೆ ಮತ್ತು ಮರಿಗಳು ಕಡಲನ್ನು ನೋಡಿ ಹಿಂತಿರುಗಿದವು. ದಾರಿಯಲ್ಲಿ ಒಂದು ಕೊಳವನ್ನು ಕಂಡವು. ಕೊಳದ ಬದಿಯಲ್ಲಿ ಕೆಲವು ಜೀವಿಗಳು ಸೇರಿದ್ದವು. “ಇಲ್ಲಿ ಏನು ನಡೆಯುತ್ತಿದೆ?” ಚಿಣ್ಣಿ ಕಪ್ಪೆ ಅಲ್ಲೇ ಇದ್ದ ಅಳಿಲಿನೊಡನೆ ಕೇಳಿತು. “ನನಗೂ ಗೊತ್ತಿಲ್ಲ. ಬಾ ನೋಡೋಣ” ಮಿಂಟು ಅಳಿಲು ಹೇಳಿತು. ಜೀವಿಗಳು ಗುಂಪುಗೂಡಿರುವಲ್ಲಿಗೆ ಅವುಗಳು ಹೋದುವು. ಅಲ್ಲಿ ಕಾಗೆ ಮತ್ತು ಮೈನಾ ಜಗಳವಾಡುತ್ತಿದ್ದವು


## ನೀಲುವಿನ ಜಾಣತನ

ಅಕ್ಕಪಕ್ಕದ ಮರಗಳಲ್ಲಿ ವಾಸಿಸುತ್ತಿದ್ದ ನೀಲು ಕಾಗೆ ಮತ್ತು ಮಾಲು ಮೈನಾ ಚರ್ಚಿಸುತ್ತಿದ್ದುವು. “ನಾನು ತುಂಬ ಎತ್ತರಕ್ಕೆ ಹಾರಬಲ್ಲೆ” ನೀಲು ಹೇಳಿತು. “ನಾನು ನಿನಗಿಂತಲೂ ಹೆಚ್ಚು ಎತ್ತರಕ್ಕೆ ಹಾರಬಲ್ಲೆ” ಮಾಲು ಹೇಳಿತು. ಕೊನೆಗೆ ಅವುಗಳು ಸ್ಪರ್ಧೆ ನಡೆಸಲು ತೀರ್ಮಾನಿಸಿದವು. ಚೀಲ ತುಂಬ ಸಾಮಗ್ರಿ ಹೊತ್ತುಕೊಂಡು ಯಾರು ಹೆಚ್ಚು ಎತ್ತರಕ್ಕೆ ಹಾರುತ್ತಾರೋ ಅವರು ಸ್ಪರ್ಧೆಯಲ್ಲಿ ಗೆಲ್ಲುವರು. ಎರಡು ಹಕ್ಕಿಗಳೂ ತಮಗೆ ಇಷ್ಟವಾದ ವಸ್ತುವಿರುವ ಚೀಲವನ್ನು ಹಿಡಿದು ಹಾರಲು ನಿರ್ಧರಿಸಿದವು.



ಆಕಾಶದಲ್ಲಿ ಮೋಡಗಳಿದ್ದವು. ಬೇಗನೆ ಮಳೆ ಬರಬಹುದೆಂದು ನೀಲುವಿಗೆ ಅನಿಸಿತು. ಹಾಗಾಗಿ ಅದು "ನಾನು ಉಪ್ಪಿನ ಚೀಲವನ್ನು ಎತ್ತಿಕೊಂಡು ಹಾರುತ್ತೇನೆ" ಎಂದು ಹೇಳಿತು. ಇದನ್ನು ಕೇಳಿ ಮಾಲು ನಕ್ಕಿತು. "ನಾನು ಹತ್ತಿಯ ಚೀಲವನ್ನು ಎತ್ತಿಕೊಂಡು ಹಾರುವೆ. ಹತ್ತಿಯು ಉಪ್ಪಿಗಿಂತ ಹಗುರವಾಗಿರುತ್ತದೆ. ಹಾಗಾಗಿ ನಾನೇ ಗೆಲ್ಲುವೆ" ಮಾಲು ಹೇಳಿತು.

ಸ್ಪರ್ಧೆ ಆರಂಭವಾಯಿತು. ಚೀಲವನ್ನು ತಮ್ಮ ಕಾಲುಗಳಲ್ಲಿ ಗಟ್ಟಿಯಾಗಿ ಹಿಡಿದುಕೊಂಡು ನೀಲು ಮತ್ತು ಮಾಲು ಹಾರತೊಡಗಿದವು.





ಮಾಲು ನೀಲುವಿಗಿಂತ ಎತ್ತರದಲ್ಲಿ ಹಾರಿತು. ಅಷ್ಟರಲ್ಲಿ ಮಳೆ ಸುರಿಯಲು ಆರಂಭವಾಯಿತು. ಎರಡೂ ಚೀಲಗಳು ಮಳೆ ನೀರಿನಿಂದ ಒದ್ದೆಯಾದವು. ನೀಲು ಹಿಡಿದುಕೊಂಡ ಚೀಲದಲ್ಲಿದ್ದ ಉಪ್ಪು ಕರಗತೊಡಗಿತು. ಚೀಲ ಹಗುರವಾಯಿತು. ಮಾಲು ಹಿಡಿದುಕೊಂಡಿದ್ದ ಹತ್ತಿ ತುಂಬಿದ ಚೀಲ ಭಾರವಾಗತೊಡಗಿತು. ಭಾರ ಹೆಚ್ಚಾಗುತ್ತಲೇ ಹೋಯಿತು. ನೀಲು ಎತ್ತರಕ್ಕೆ ಹಾರಿತು. ಮಾಲುವಿಗೆ ಹೆಚ್ಚು ಎತ್ತರಕ್ಕೆ ಹಾರಲು ಸಾಧ್ಯವಾಗಲಿಲ್ಲ. ನೀಲು ಕಾಗೆ ಸ್ಪರ್ಧೆಯಲ್ಲಿ ಜಯಗಳಿಸಿತು.





## ಉತ್ತರಿಸಿರಿ

- ನೀಲು ಮತ್ತು ಮಾಲು ಯಾಕೆ ಜಗಳವಾಡಿದವು?
- ನೀಲು ಕಾಗೆ ಯಾವ ಚೀಲವನ್ನು ಹಿಡಿದುಕೊಂಡು ಹಾರಿತು?
- ಮಾಲು ಯಾವ ಚೀಲವನ್ನು ಹಿಡಿದುಕೊಂಡು ಹಾರಿತು?
- ಮಾಲುವಿನ ಚೀಲ ಯಾಕೆ ಭಾರವಾಯಿತು?
- ನೀಲುವಿನ ಚೀಲ ಯಾಕೆ ಹಗುರವಾಯಿತು?
- ಸ್ಪರ್ಧೆಯಲ್ಲಿ ಯಾರು ಜಯಗಳಿಸಿದರು?

## ಬರೆಯಿರಿ

**ಸರಿಯಾದ ಪದವನ್ನು ಆರಿಸಿ ವಾಕ್ಯವನ್ನು ಪೂರ್ತಿಗೊಳಿಸಿರಿ.**

- ನೀಲು ಮತ್ತು ಮಾಲು ________________ (ಜಗಲ / ಜಗಳ) ವಾಡತೊಡಗಿದವು.
- ಯಾರು ಹೆಚ್ಚು ಎತ್ತರಕ್ಕೆ ಹಾರುವುದೆಂದು ________ (ಸ್ಪರ್ದೆ/ ಸ್ಪರ್ಧೆ) ನಡೆಸಲು ನಿರ್ಧರಿಸಿದವು.
- ಮಾಲು ಮೈನಾ ______________ (ಹತ್ತಿ / ಅತ್ತಿ ) ಯ ಚೀಲವನ್ನು ಹಿಡಿದುಕೊಂಡು ಹಾರಿತು.
- ಉಪ್ಪು ಕರಗಿ ಚೀಲ __________________ (ಹಗುರ / ಅಗುರ ) ವಾಯಿತು.

## ಬರೆಯಿರಿ

**ಕೆಳಗೆ ಕೊಟ್ಟಿರುವವುಗಳಲ್ಲಿ ಸರಿಯಾದ ಹೇಳಿಕೆಯ ಮುಂದೆ 'ಸರಿ' ಎಂದೂ ತಪ್ಪಾದ ಹೇಳಿಕೆಯ ಮುಂದೆ 'ತಪ್ಪು' ಎಂದೂ ಬರೆಯಿರಿ. ತಪ್ಪಾದ ಹೇಳಿಕೆಗಳನ್ನು ಸರಿಪಡಿಸಿ ಬರೆಯಿರಿ.**

- ನೀಲು ಉಪ್ಪಿನ ಚೀಲವನ್ನು ಎತ್ತಿಕೊಂಡು ಹಾರಿತು.
- ಮಳೆ ಬಂದಾಗ ಚೀಲಗಳು ಒದ್ದೆಯಾದವು.
- ನೀಲು ಕಾಗೆ ಸ್ಪರ್ಧೆಯಲ್ಲಿ ಸೋತುಹೋಯಿತು.
- ಉಪ್ಪು ಕರಗಿದಾಗ ಚೀಲದ ಭಾರ ಹೆಚ್ಚಾಯಿತು.
- ಚೀಲವನ್ನು ಕೊಕ್ಕಿನಲ್ಲಿ ಹಿಡಿದು ಹಾರಿದವು.
- ಮಾಲು ಮೈನಾ ಹತ್ತಿಯ ಚೀಲವನ್ನು ಹಿಡಿದುಕೊಂಡು ಹಾರಿತು.

**ಸರಳ ಪ್ರಯೋಗ :**

ಒಂದು ಗ್ಲಾಸಿನಲ್ಲಿ ನೀರು ತೆಗೆದುಕೊಳ್ಳಿರಿ. ಅದಕ್ಕೆ ಸ್ವಲ್ಪ ಸಕ್ಕರೆ ಹಾಕಿರಿ. ಚೆನ್ನಾಗಿ ಕದಡಿರಿ. ಸಕ್ಕರೆ ಏನಾಗುವುದು? ನಿರೀಕ್ಷಿಸಿರಿ.

ಇನ್ನೊಂದು ಗ್ಲಾಸಿನಲ್ಲಿ ನೀರು ತೆಗೆದು ಅದಕ್ಕೆ ಪಚ್ಚೆ ಹೆಸರು ಹಾಕಿ ಕದಡಿರಿ. ಏನಾಗುವುದು? ನಿರೀಕ್ಷಿಸಿ ನಿಮ್ಮ ನಿಗಮನ ಬರೆಯಿರಿ.

- ಕೆಳಗೆ ಕೊಟ್ಟಿರುವ ವಸ್ತುಗಳನ್ನು ನೀರಿನಲ್ಲಿ ಕರಗುವ ಮತ್ತು ಕರಗದ ವಸ್ತುಗಳೆಂದು ವರ್ಗೀಕರಿಸಿ ಬರೆಯಿರಿ.

**(ಉಪ್ಪು, ಉದ್ದಿನ ಬೇಳೆ, ಸಕ್ಕರೆ, ಕಲ್ಲು, ಅಲಸಂಡೆ ಬೀಜ, ಗ್ಲುಕೋಸ್, ಹಾಲಿನ ಹುಡಿ, ಕಡಲೆ )**

## ಬರೆಯಿರಿ





- ಚಿತ್ರವನ್ನು ನಿರೀಕ್ಷಣೆ ಮಾಡಿರಿ. ಚಿತ್ರದಲ್ಲಿ ಏನು ಕಾಣುವಿರಿ? ನಿಮ್ಮ ಪರಿಸರದಲ್ಲಿ ನೀರು ಪೋಲಾಗುವ ಇತರ ಸಂದರ್ಭಗಳನ್ನು ಬರೆಯಿರಿ.

## ಬರೆಯಿರಿ


- ನೀರು ಪೋಲಾಗುವ ಕಡೆಗಳಲ್ಲಿ ನೆಡಲು ಸೂಚನಾ ಫಲಕಗಳನ್ನು ತಯಾರಿಸಿರಿ.

## ಬರೆಯಿರಿ

- ನೀರಿನ ಉಪಯೋಗದ ಕುರಿತು ತರಗತಿಯಲ್ಲಿ ಚರ್ಚಿಸಿ ಚಟುವಟಿಕೆ ಪುಸ್ತಕದಲ್ಲಿ ಬರೆಯಿರಿ.
- ಮಳೆಗಾಲದ ಕುರಿತು ವಿವರಣೆ ಬರೆಯಿರಿ

## ಪದಬಂಧ

**ಕೊಟ್ಟಿರುವ ಒಗಟುಗಳನ್ನು ಓದಿ ಪದಬಂಧ ಪೂರ್ತಿಗೊಳಿಸಿರಿ.**





### ಎಡದಿಂದ ಬಲಕ್ಕೆ

1. ಅಮ್ಮನ ನೀಲಿ ಸೀರೆ, ಭಾರೀ ದೊಡ್ಡ ಸೀರೆ. ನೆರಿಗೆ ಎಣಿಸಲು ಯಾರಿಗೂ ಸಾಧ್ಯವಿಲ್ಲ.
2. ಕಣ್ಣಿಲ್ಲ ಕಾಲಿಲ್ಲ, ಆದರೂ ಚಲಿಸುತ್ತದೆ. ಸಿಕ್ಕಿದ್ದನ್ನೆಲ್ಲ ಒಯ್ಯುತ್ತದೆ. ಹೋದಲ್ಲೆಲ್ಲ ಉಪಕಾರ ಮಾಡುತ್ತದೆ.
3. ಕಣ್ಣಿಗೆ ಕಾಣುವುದಿಲ್ಲ. ಕೈಗೆ ಸಿಗುವುದಿಲ್ಲ. ಅದಿಲ್ಲದಿದ್ದರೆ ನಾವಿಲ್ಲ.
7. ಬಿಸಿಲಿನಲ್ಲಿ ಅರಳುವೆನು.ನೆರಳಿನಲ್ಲಿ ಮುದುಡುವೆನು.
8. ಕಟ್ಟೆಇಲ್ಲದ ಕೆರೆಯಲ್ಲಿ ತಟ್ಟೆ ತೇಲುತ್ತದೆ.

### ಮೇಲಿನಿಂದ ಕೆಳಗೆ

1. ಕೂಗಿದರೆ ರಾವಣ.ಹಾರಿದರೆ ಹನುಮಂತ. ಕುಳಿತರೆ ಮುನಿ.
4. ಎಷ್ಟು ಕಡಿದರೂ ತುಂಡಾಗುವುದಿಲ್ಲ.
5. ನೀರಿನಲ್ಲಿದ್ದರೆ ಗಿಲಿಗಿಲಿ. ನೀರಿನಿಂದ ಹೊರ ಬಂದರೆ ವಿಲಿವಿಲಿ.
6. ಆಕಾಶದಲ್ಲಿ ಬೆಣ್ಣೆ ಮುದ್ದೆ ತೇಲಾಡುತ್ತದೆ.

## ಕಾಗದದ ಮೀನು :



1. ಕಾಗದವನ್ನು ಚೌಕಾಕೃತಿಯಲ್ಲಿ ಕತ್ತರಿಸಿ ತೆಗೆಯಿರಿ.
2. ಕಾಗದದ ಎರಡು ವಿರುದ್ಧ ಬದಿಗಳು ಮಧ್ಯೆ ಸೇರುವಂತೆ ಮಡಚಿರಿ.
3. ಜೋಡಿಸಿದ ಭಾಗಗಳಿಗೆ ಸೇರುವಂತೆ ಮೂರನೆ ತುದಿಯನ್ನು ಮಡಚಿರಿ.
4. ಕಾಗದವನ್ನು ಅರ್ಧಕ್ಕೆ ಮಡಚಿರಿ.
5. ಇನ್ನೊಂದು ತುದಿಯನ್ನು ಒಳಭಾಗಕ್ಕೆ ಮೇಲಕ್ಕೆ ಮಡಚಿ ಬಾಲವನ್ನಾಗಿ ಮಾಡಿರಿ.
6. ಬಾಲದ ತುದಿಯನ್ನು ನಡುವೆ ಕತ್ತರಿಸಿ ಅಗಲಕ್ಕೆ ಮಡಚಿರಿ.
7. ತಿಮಿಂಗಿಲಕ್ಕೆ ಸ್ಕೆಚ್‌ಪೆನ್‌ನಿಂದ ಎರಡು ಬದಿಗಳಲ್ಲಿ ಕಣ್ಣು, ಬಾಯಿ ಬಿಡಿಸಿ ಬದಿಯ ರೆಕ್ಕೆಗಳನ್ನೂ ಚಿತ್ರಿಸಬಹುದು ಅಥವಾ ಕಾಗದದ ಚಿಕ್ಕ ತುಂಡುಗಳನ್ನು ಬೇಕಾದ ಆಕಾರದಲ್ಲಿ ಕತ್ತರಿಸಿ ಅಂಟಿಸಬಹುದು.

ಹಾಡಿರಿ

# ಬಾರೊ ಮಳೆರಾಯ

ಬಾರೊ ಈ ಮಣ್ಣಿಗೆ ಮಳೆರಾಯ
ತಾರೊ ನೀ ಸಂಪದ ಸೌಭಾಗ್ಯ
ತಾರೊ ನೀ ಸಂಪದ ಸೌಭಾಗ್ಯ
ಗುಡುಗಿನ ಕುದುರೆ ಏರಿ
ಬಿರುಗಾಳಿ ಬೆನ್ನನ್ನೇರಿ
ಮಿಂಚಿನ ಕಡುಗದ ಸರದಾರ
ಮಿಂಚಿನ ಕಡುಗದ ಸರದಾರ
ಕಾರ್ಮೋಡ ಬೆಳ್ಳಿ ಮೋಡ
ಮಳೆ ಮೋಡ ಮಿಂಚಿನ್ಮೋಡ
ಸ್ವಾತಿಯ ಮುತ್ತಿನ್ಮೋಡ ಬಲು ಚಂದ
ಸ್ವಾತಿಯ ಮುತ್ತಿನ್ಮೋಡ ಬಲು ಚಂದ
ತೆಂಗಿನ ತೋಟವೆ ಚಂದ
ಮಾವಿನ ಮರಗಳೆ ಅಂದ
ಕಂಗಿನ ಹೂವಿನ ಗಂಧ ನಿನ್ನಿಂದ
ಕಂಗಿನ ಹೂವಿನ ಗಂಧ ನಿನ್ನಿಂದ
ನೆಲಕೆಲ್ಲ ಹಸುರನ್ನಿರಿಸು
ಗಿಡಕೆಲ್ಲ ಹೂಗಳ ಮುಡಿಸು
ಹೊಲಕೆಲ್ಲ ನೀರ್ಕೊಡು ಮಳೆರಾಯ
ಹೊಲಕೆಲ್ಲ ನೀರ್ಕೊಡು ಮಳೆರಾಯ

# ಕಲಿಕಾ ಸಾಧನೆಗಳು

## ಕನ್ನಡ

1. ಸ್ವಂತ ಭಾಷಾಶೈಲಿಯನ್ನು ಬಳಸಿಕೊಂಡು ತನ್ನ ಆಶಯ ಪ್ರತಿಬಿಂಬಿಸುವಂತೆ ಸರಳ ಟಿಪ್ಪಣಿಯನ್ನು ತಯಾರಿಸುವುದು.
2. ನೀಡಿದ ಸಾಲುಗಳ ಲಯವನ್ನು ಪರಿಗಣಿಸಿಕೊಂಡು ಸೂಕ್ತವಾದ ಸಾಲುಗಳನ್ನು ಸೇರಿಸಿ ಹಾಡುವುದು ಮತ್ತು ಬರೆಯುವುದು.
3. ತನ್ನ ಆಶಯುವನ್ನು ಉಪಯೋಗಿಸಿ ವಿಭಿನ್ನ ಭಾಷಾ ವ್ಯವಹಾರ ರೂಪಗಳನ್ನು ತಯಾರಿಸಿ ಸಂಚಿಕೆಗಳಲ್ಲಿ ಪ್ರಕಟಿಸುವುದು.
4. ಶಿಶುಗೀತೆಗಳನ್ನು ರಾಗ, ತಾಳಗಳೊಂದಿಗೆ ಹಾಡುವುದು.
5. ಸರಳ ಒಗಟುಗಳ ಉತ್ತರಗಳನ್ನು ಕಂಡುಹಿಡಿದು ಸರಳವಾದ ಹೊಸ ಒಗಟುಗಳನ್ನು ರಚಿಸುವುದು.
6. ಚಿತ್ರಕಥೆಗಳನ್ನು ನಿರೀಕ್ಷಣೆ ಮಾಡಿ ಆಶಯುಗಳನ್ನು ಕ್ರಮೀಕರಿಸಿ ಕಥೆ ಹೇಳುವುದು.

## ಪರಿಸರ

1. ನೀರನ್ನು ಹಲವು ಅಗತ್ಯಗಳಿಗೆ ಉಪಯೋಗಿಸುತ್ತಾರೆ.
2. ನೆಲದಲ್ಲೂ ನೀರಿನಲ್ಲೂ ವಾಸಿಸುವ ಜೀವಿಗಳಿವೆ.
3. ಜೀವಿಸಲು ನೀರು ಅಗತ್ಯ.
4. ನೀರಿನಲ್ಲಿ ಕರಗುವ ಹಾಗೂ ಕರಗದ ವಸ್ತುಗಳಿವೆ.
5. ನೀರಿನಲ್ಲಿ ಮುಳುಗುವ ಮತ್ತು ತೇಲುವ ವಸ್ತುಗಳಿವೆ.
6. ನೀರು ಪೋಲಾಗುವ ಸಂದರ್ಭಗಳಿವೆ. ನೀರನ್ನು ಸಂರಕ್ಷಿಸಬೇಕಾಗಿದೆ.
7. ವಿವಿಧ ಜಲಮೂಲಗಳಿವೆ. ಅವುಗಳಿಗೆ ತಮ್ಮದೇ ಆದ ವಿಶೇಷತೆಗಳಿವೆ.

ಪಾಠ - 7

# ತಿನ್ನುವ ಬೆಳೆಯುವ

ಅಂದು ರಜಾದಿನ. ಮಹೇಶನ ಗೆಳೆಯರಾದ ಯಾಸಿರ್, ಅವನ ತಂಗಿ ಆಯಿಷಾ, ರವೀಶ, ಗಿರಿ ಎಲ್ಲರೂ ಆಟವಾಡಲು ಮಹೇಶನ ಮನೆಗೆ ಬಂದರು. ಮಹೇಶನ ಅಮ್ಮ ಒಂದು ತಟ್ಟೆಯಲ್ಲಿ ತರತರದ ಸಿಹಿತಿಂಡಿಗಳನ್ನು ಇರಿಸಿ ಮಕ್ಕಳಿಗೆ ಕೊಟ್ಟರು. "ಆಹಾ! ಎಷ್ಟು ರುಚಿಯಾಗಿದೆ ಈ ಚಕ್ಕುಲಿ. ಇದು ಎಲ್ಲಿಂದ ತಂದದ್ದು?" ಯಾಸಿರ್ ಕೇಳಿದ. "ನಾವು ಪೇಟೆಯಿಂದ ತಿಂಡಿ ತರುವುದಿಲ್ಲ. ಈ ತಿಂಡಿಗಳೆಲ್ಲ ನನ್ನ ಅಮ್ಮನೇ ತಯಾರಿಸಿದ್ದು. ನನ್ನ ಅಮ್ಮನ ಅಡುಗೆ ಮನೆ ಹೇಗಿದೆ ಗೊತ್ತೆ?" ಮಹೇಶ ಹೇಳಿದನು.



# ಅಮ್ಮನ ಅಡಿಗೆ ಮನೆ



ಅಡಿಗೆ ಮನೆ ಅಡಿಗೆ ಮನೆ
ನಮ್ಮನೆ ಅಮ್ಮನ ಅಡಿಗೆ ಮನೆ
ಹಸಿದಿಹ ಹೊಟ್ಟೆಗೆ ಬಿಸಿಬಿಸಿ ಊಟವ
ದಿನ ದಿನ ನೀಡುವ ನಮ್ಮ ಮನೆ ॥

ತಿನ್ನಲು ರುಚಿಕರ ಚಕ್ಕುಲಿ ಉಂಡೆ
ಕಮ್ಮಗೆ ಕರಿದಿಹ ಕೋಡುಬಳೆ
ಮಸಾಲೆ ಮೆತ್ತಿದ ತರಿ ಹುರಿಗಾಳು
ಜೊತೆಗೆ ತಿನ್ನಲು ತೇಂಗೊಳಲು ॥

ಹಪ್ಪಳ ಸೆಂಡಿಗೆ ಉಪ್ಪಿನಕಾಯಿ
ತುಪ್ಪ ಹಾಲು ಮಜ್ಜಿಗೆ ಮೊಸರು
ಅನ್ನ ಸಾರು ಕುಡಿಯಲು ಖೀರು
ಸಾಲದೆ ಊಟಕೆ ಇನ್ನೇನು? ॥

ಅತ್ತರೆ ಅಮ್ಮನು ಹಾಕುವಳೂಟ
ಮುನಿದರೆ ಕೊಡುವಳು ತಿಂಡಿಗಳ
ಅಮ್ಮನ ಪ್ರೀತಿಯ ಸಿಹಿಮುತ್ತು
ಮಮತೆಯು ತುಂಬಿದ ಸಂಪತ್ತು ॥

– ಬೇಡರೆಡ್ಡಿ ಹಳ್ಳಿ ಪಂಪಣ್ಣ

**ಹಾಡಿರಿ**

ಈ ಪದ್ಯವನ್ನು ರಾಗವಾಗಿ ಹಾಡಿರಿ

## ಉತ್ತರಿಸಿರಿ

- ಆಹಾರ ತಯಾರಿಸುವ ಕೋಣೆ ಯಾವುದು?
- ಊಟಕ್ಕೆ ಯಾವ ಯಾವ ಆಹಾರ ಪದಾರ್ಥಗಳಿವೆ?
- ಈ ಪದ್ಯದಲ್ಲಿರುವ ಕರಿದ ತಿಂಡಿಗಳು ಯಾವುವು?
- ಅತ್ತರೆ ಅಮ್ಮನು ಏನು ಮಾಡುವಳು?
- ಮಮತೆಯು ತುಂಬಿದ ಸಂಪತ್ತು ಯಾವುದು?

## ಬರೆಯಿರಿ

**ಕೆಳಗೆ ಕೊಟ್ಟಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.**

| ಆಹಾರ ಪದಾರ್ಥ | ಬಳಸುವ ವಸ್ತುಗಳು |
|---|---|
| ದೋಸೆ | ಅಕ್ಕಿ, ಉಪ್ಪು, ನೀರು |
| ಸಾಂಬಾರ್ | |
| | |
| | |
| | |
| | |
| | |

## ಬರೆಯಿರಿ

**ಕೆಳಗಿನ ಒಗಟುಗಳಿಗೆ ಉತ್ತರ ಬರೆಯಿರಿ**

ಚಂದ್ರಬಿಂಬವ ಹೋಲುವುದು
ಎಲ್ಲರ ಮನವನು ಸೆಳೆಯುವುದು
ಕಂಡರೆ ಬಾಯಲಿ ನೀರೂರುವುದು
ಸುಟ್ಟರೆ ಕರು ಕುರು ಎನ್ನುವುದು
ತಿನ್ನಲು ಬಲು ರುಚಿಯಾಗುವುದು

ಸಣ್ಣದಾದ ಹರಳಣ್ಣ
ಕಾಣಲು ನೀನು ಬಿಳಿಯಣ್ಣ
ನೀನಿಲ್ಲದೆ ಊಟ ಯಾಕಣ್ಣ?

ಅಟ್ಟದ ಮೇಗಣ ಪುಟ್ಟಣ್ಣ
ಮೆಲ್ಲಗೆ ಕೆಳಗೆ ಇಳಿಸಣ್ಣ
ಜಡೆಯು ಕಂಡಿತು ನೋಡಣ್ಣ
ಹೇಳಿರಿ ನಾನು ಯಾರಣ್ಣ

## ಬರೆಯಿರಿ

**ಆಹಾರ ಪದಾರ್ಥವು ಉತ್ತರವಾಗಿ ಬರುವಂತೆ ಒಗಟು ಪದ್ಯ ಬರೆಯಿರಿ.**

## ಬರೆಯಿರಿ

ಕೋಣೆಗಳಲ್ಲಿ ಅಡಗಿರುವ ತಿಂಡಿಗಳ ಹೆಸರನ್ನು ಹುಡುಕಿ ಬರೆಯಿರಿ.

| | | | | | | | | | |
|---|---|---|---|---|---|---|---|---|---|
| ನ | ದ | ಕಾ | ಶಿ | ಹ | ಲ್ವ | ವ | ಚ | ಕ್ಕು | ಲಿ |
| ಗೋ | ಳಿ | ಬ | ಜಿ | ಹ | ಕ | ಎ | ಳ್ಳು | ಉಂ | ಡೆ |
| ಕ್ಷ | ಕೋ | ಡು | ಬ | ಳೆ | ಕಾ | ಮ | ಮೆ | ಸಾ | ಟು |
| ಶ | ಥ | ಖೀ | ರು | ಲ | ಹೋ | ಸಾ | ವ | ಸ | ಮು |
| ಜಿ | ಗ | ಡ | ನೀ | ವ | ಳಿ | ಲೆ | ಸ | ಮೋ | ಸ |
| ಲೇ | ಟ | ಧ | ಸೇ | ಮಿ | ಗೆ | ದೋ | ಭ | ಸ | ಢ |
| ಬಿ | ಮೈ | ಸೂ | ರು | ಪಾ | ಕು | ಶೆ | ಪ | ರೋ | ಟ |

## ಬರೆಯಿರಿ

ನೀವು ಪಟ್ಟಿ ಮಾಡಿದ ತಿಂಡಿಗಳನ್ನು ಸಿಹಿತಿಂಡಿಗಳು ಮತ್ತು ಖಾರದ ತಿಂಡಿಗಳು ಎಂದು ವರ್ಗೀಕರಿಸಿ ಬರೆಯಿರಿ.

| ಸಿಹಿತಿಂಡಿ | ಖಾರ ತಿಂಡಿ |
|---|---|
| | |

## ಬರೆಯಿರಿ

ಅಡುಗೆ ಮಾಡಲು ಉಪಯೋಗಿಸುವ ವಿವಿಧ ರೀತಿಯ ಒಲೆಗಳನ್ನು ಕೆಳಗೆ ಕೊಡಲಾಗಿದೆ. ಅವುಗಳಿಗೆ ಬಳಸುವ ಇಂಧನವು ಯಾವುದೆಂದು ಗೆರೆ ಎಳೆದು ಸೂಚಿಸಿರಿ.

| ಒಲೆ | ಇಂಧನ |
| --- | --- |
|  | ಸೀಮೆ ಎಣ್ಣೆ |
|  | ಗ್ಯಾಸ್ |
|  | ಕಟ್ಟಿಗೆ |
|  | ಸೌರಶಕ್ತಿ |




**ನಿಮಗೆ ತಿಳಿದಿರುವ ಆಹಾರ ಪದಾರ್ಥಗಳನ್ನು ಕೆಳಗೆ ಕೊಟ್ಟಿರುವ ಕೋಣೆಗಳಲ್ಲಿ ವರ್ಗೀಕರಿಸಿ ಬರೆಯಿರಿ.**

| ಬೇಯಿಸಿ ತಿನ್ನುವವುಗಳು | ಬೇಯಿಸದೆ ತಿನ್ನುವವುಗಳು | ಬೇಯಿಸಿಯೂ ಬೇಯಿಸದೆಯೂ ತಿನ್ನುವವುಗಳು |
|---|---|---|
| | | |




**ಕೆಳಗಿನ ವಸ್ತುಗಳಲ್ಲಿ ತಯಾರಿಸುವ ಆಹಾರ ಪದಾರ್ಥಗಳ ಹೆಸರುಗಳನ್ನು ಬರೆಯಿರಿ.**

| ವಸ್ತು | ತಯಾರಿಸುವ ಆಹಾರ |
|---|---|
|  | ...................................... |
|  | ಚಪಾತಿ, ............................. |
|  | ...................................... |

## ಬರೆಯಿರಿ

**ಹೆಸರುಬೇಳೆ ಕೋಸಂಬರಿ ತಯಾರಿಸುವ ಕ್ರಮವನ್ನು ಕೆಳಗೆ ಕೊಡಲಾಗಿದೆ. ಅದನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ.**

- ಕ್ಯಾರೆಟನ್ನು ತುರಿಯಬೇಕು.
- ಮೆಣಸಿನಕಾಯಿ ಮತ್ತು ಕೊತ್ತಂಬರಿ ಸೊಪ್ಪನ್ನು ಸಣ್ಣಗೆ ಕತ್ತರಿಸಬೇಕು.
- ಹೆಸರುಬೇಳೆಯನ್ನು ನೀರಿನಲ್ಲಿ ನೆನೆಹಾಕಬೇಕು.
- ಎಲ್ಲವನ್ನು ಮಿಶ್ರಮಾಡಿ ಸ್ವಲ್ಪ ತೆಂಗಿನ ತುರಿಯನ್ನು ಹಾಕಬೇಕು.
- ಒಗ್ಗರಣೆಯನ್ನು ಮಿಶ್ರಣಕ್ಕೆ ಹಾಕಬೇಕು.
- ಸ್ವಲ್ಪ ಲಿಂಬೆ ರಸವನ್ನು ಮಿಶ್ರಣಕ್ಕೆ ಹಿಂಡಬೇಕು.
- ಸ್ವಲ್ಪ ಎಣ್ಣೆಯನ್ನು ಕಾಯಿಸಿ ಸಾಸಿವೆ, ಕರಿಬೇವು ಹಾಕಿ ಒಗ್ಗರಣೆ ತಯಾರಿಸಬೇಕು.
- ಅಗತ್ಯಕ್ಕೆ ತಕ್ಕಷ್ಟು ಉಪ್ಪು ಹಾಕಬೇಕು.
- ಎಲ್ಲವನ್ನು ಚೆನ್ನಾಗಿ ಕಲಸಿದಾಗ ಹೆಸರುಬೇಳೆ ಕೋಸಂಬರಿ ತಯಾರು.

## ಬರೆಯಿರಿ

**ನಿಮ್ಮ ಮನೆಯಲ್ಲಿ ತಯಾರಿಸುವ ಯಾವುದಾದರೂ ತಿಂಡಿಯನ್ನು (ಆಹಾರ ಪದಾರ್ಥವನ್ನು) ತಯಾರಿಸುವ ವಿಧಾನವನ್ನು ಬರೆಯಿರಿ.**




**ಕೆಳಗೆ ಕೊಟ್ಟಿರುವ ಕೋಣೆಗಳಿಂದ ಪದಗಳನ್ನು ಆಯ್ಕೆ ಮಾಡಿ ಸೂಕ್ತವಾದ ವಾಕ್ಯಗಳನ್ನು ರಚಿಸಿರಿ.**

| | | |
|---|---|---|
| ಅವನು | ಕೋಸಂಬರಿ | ಕುಡಿಯಿತು |
| ಹುಡುಗ | ಹೋಳಿಗೆ | ಕುಡಿದನು |
| ಅವಳು | ತಿಂಡಿ | ಕುಡಿದಳು |
| ಅದು | ಚಹಾ | ತಿಂದಿತು |
| ರಾಣಿ | | ತಿಂದಳು |
| ರಾಜ | | ಮಾಡಿತು |
| | | ಮಾಡಿದಳು |
| | | ಮಾಡಿದನು |

ಉದಾ : ಹುಡುಗ ಹೋಳಿಗೆ ತಿಂದನು.

______________________________

______________________________

______________________________




**ವಿವಿಧ ಆಹಾರಪದಾರ್ಥಗಳನ್ನು ತಯಾರಿಸುವ ಹಂತಗಳನ್ನು ತರಗತಿಯಲ್ಲಿ ಅಭಿನಯಿಸಿರಿ.**

# ಆಹಾರ ವೈಭವ

ಹಾಲು ಬೆಣ್ಣೆ ಸೊಪ್ಪಿನ ಪಲ್ಯ
ಮೀನು ಮೊಟ್ಟೆ ದೇಹಕೆ ಬೇಕು
ಹೆಸರು ಕಡಲೆ ರಾಗಿ ಹಿಟ್ಟು
ಬಟಾಣಿ ಅವರೆ ತಿನ್ನಲೆ ಬೇಕು ।

ಮೊಳೆತ ಕಾಳು ತಾಜಾ ಕ್ಯಾರೆಟ್
ಹಸಿಹಸಿಯಾಗಿ ತಿನ್ನಲುಬಹುದು
ಕಿತ್ತಳೆಹಣ್ಣು ಬಾಳೆಹಣ್ಣು
ಊಟದ ನಂತರ ಸೇವಿಸಬೇಕು ।

ಮೊಸರು ತುಪ್ಪ ಕಾಯಿಪಲ್ಲೆ
ರೋಗವ ತಡೆಯಲು ಬೇಕೇ ಬೇಕು
ಕುಂಬಳಕಾಯಿ ಹಾಗಲಕಾಯಿ
ನಿತ್ಯವು ನಾವು ಬಳಸಲೆ ಬೇಕು ।

ಪೋಷಕಯುಕ್ತ ಹಿತಮಿತ ತಿನಿಸು
ನೆಮ್ಮದಿ ಕೊಡುವುದು ದಿನನಿತ್ಯ
ಬೇಕರಿ ತಿನಿಸು ಕರಿದ ಪದಾರ್ಥ
ರೋಗವ ತರುವುದು ಇದು ಸತ್ಯ ।




**ಈ ಪದ್ಯವನ್ನು ರಾಗವಾಗಿ ಹಾಡಿರಿ.**

## ಉತ್ತರಿಸಿ

- ಹಸಿಯಾಗಿ ತಿನ್ನಬಹುದಾದ ಎರಡು ತರಕಾರಿಗಳು ಯಾವುವು?
- ಊಟದ ನಂತರ ಏನನ್ನು ಸೇವಿಸಬೇಕು?
- ಪೋಷಕಯುಕ್ತ ಆಹಾರಗಳಿಂದ ಏನು ಪ್ರಯೋಜನಗಳಿವೆ?
- ಏನನ್ನು ಅಧಿಕವಾಗಿ ಸೇವಿಸುವುದರಿಂದ ರೋಗಗಳು ಬರುತ್ತವೆ?

## ಬರೆಯಿರಿ

**ಕೆಲವು ಆಹಾರ ವಸ್ತುಗಳ ಪ್ರಧಾನ ಭಾಗವನ್ನಲ್ಲದೆ ಇತರ ಭಾಗವನ್ನೂ ಆಹಾರವಾಗಿ ಬಳಸಬಹುದು. ಅಂತಹವುಗಳಲ್ಲಿ ಕೆಲವನ್ನು ಪಟ್ಟಿಯಲ್ಲಿ ಕೊಡಲಾಗಿದೆ. ಪಟ್ಟಿಯನ್ನು ಮುಂದುವರಿಸಿ ಬರೆಯಿರಿ.**

| ವಸ್ತು | ತಯಾರಿಸುವ ಆಹಾರ ಪದಾರ್ಥ |
|---|---|
| ಬಾಳೆ ಹೂ | ಚಟ್ನಿ, ಪಲ್ಯ |
| ದಾಳಿಂಬೆ ಸಿಪ್ಪೆ | ತಂಬ್ಳಿ |
| ಬಾಳೆ ದಿಂಡು | ಪಲ್ಯ, ಗೊಜ್ಜು, ಚಟ್ನಿ, ಪೋಡಿ |
| ____________ | ____________________ |
| ____________ | ____________________ |
| ____________ | ____________________ |
| ____________ | ____________________ |

ಓದಿರಿ

# ದೋಸೆಗೆ ರುಚಿಯಿಲ್ಲ

ನೀತು ಶಾಲೆಬಿಟ್ಟು ಮನೆಗೆ ಬಂದಳು. ಅಮ್ಮಾ.... ಕೂಗಿ ಕರೆದಳು. ಯಾರೂ ಮಾತನಾಡುವುದು ಕೇಳಿಸಲಿಲ್ಲ. ಅಮ್ಮನೂ ಅಪ್ಪನೂ ಮನೆಯಲ್ಲಿ ಇರಲಿಲ್ಲ. ಜೋರು ಹಸಿವೆಯಾಗುತ್ತದೆ. ಏನು ಮಾಡಲಿ? ನೀತು ಯೋಚಿಸಿದಳು. ತಿಂಡಿಯ ಡಬ್ಬಗಳನ್ನೆಲ್ಲಾ ಹುಡುಕಿದಳು. ಏನೂ ಸಿಗಲಿಲ್ಲ. ಅವಳಿಗೆ ಅಳು ಬಂತು. ಜೋರಾಗಿ ಅಳುತ್ತಾ ಕುಳಿತಳು.

“ನೀತು ಅಳಬೇಡ” ಯಾರೋ ಹೇಳುವುದು ಕೇಳಿಸಿತು. ಸುತ್ತಲೂ ನೋಡಿದಳು. ಅಲ್ಲೇ ಇದ್ದ ಅಕ್ಕಿಯ ಡಬ್ಬದಿಂದ ಧ್ವನಿ ಕೇಳಿಸಿತು. “ನೀತು ನಿನಗೆ ಹಸಿವೆಯಾಗುತ್ತಿದೆ ಅಲ್ಲವೇ? ನನ್ನಿಂದ ದೋಸೆ ಮಾಡು” ಅಕ್ಕಿ ಹೇಳಿತು.



“ದೋಸೆ ಮಾಡಲು ದೋಸೆ ಹಿಟ್ಟು ಬೇಡವೇ? ನಾನು ಹೇಗೆ ಅದನ್ನು ತಯಾರಿಸುವುದು? ನನಗೆ ತಿಳಿದಿಲ್ಲ” ಎಂದಳು ನೀತು.



ಆಗ ಅಕ್ಕಿಯು ಅವಳಲ್ಲಿ “ನೀನೇನು ಚಿಂತಿಸಬೇಡ. ನಾನು ಹೇಳಿಕೊಡುತ್ತೇನೆ. ನೀನು ಸ್ವಲ್ಪ ಅಕ್ಕಿಯನ್ನು ತೆಗೆದುಕೊಂಡು ತೊಳೆದು ಅರೆಯುವ ಕಲ್ಲಿಗೆ ಹಾಕಿ ರುಬ್ಬು. ಅಗತ್ಯಕ್ಕೆ ತಕ್ಕಂತೆ ನೀರನ್ನು ಸೇರಿಸು. ಆಗ ದೋಸೆ ಹಿಟ್ಟು ಸಿಗುತ್ತದೆ” ಎಂದಿತು. ನೀತುವಿಗೆ ಅಕ್ಕಿ ಹೇಳಿದ್ದು ಸರಿ ಎಂದು ತೋರಿತು.

ಸ್ವಲ್ಪ ಅಕ್ಕಿಯನ್ನು ತೆಗೆದು ತೊಳೆದು ರುಬ್ಬುವ ಕಲ್ಲಿನಲ್ಲಿ ಹಾಕಿ ರುಬ್ಬಿದಳು. ನೀರನ್ನು ಸೇರಿಸಿದಳು. "ನೀತು, ನೀನು ದೋಸೆ ಮಾಡುತ್ತೀಯಲ್ಲಾ. ನಮ್ಮನ್ನು ಸೇರಿಸಿದರೆ ತುಂಬಾ ರುಚಿಯಾಗಿರುತ್ತದೆ" ಕೊತ್ತಂಬರಿ, ಬೆಲ್ಲ, ಮೆಣಸು, ನೀರುಳ್ಳಿ ಎಲ್ಲ ಒಟ್ಟಾಗಿ ಹೇಳಿದವು. ನೀತು ಅವುಗಳನ್ನೆಲ್ಲಾ ಸೇರಿಸಿ ದೋಸೆ ಹಿಟ್ಟು ತಯಾರಿಸಿದಳು. 'ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿಯಿಲ್ಲ' ಎಂದು ತರಗತಿಯಲ್ಲಿ ಟೀಚರು ಹೇಳಿದ್ದು ನೀತುವಿಗೆ ನೆನಪಾಯಿತು. ಅವಳು ಹಿಟ್ಟಿಗೆ ಸ್ವಲ್ಪ ಉಪ್ಪನ್ನು ಸೇರಿಸಿದಳು. ಅಷ್ಟರಲ್ಲಿ ಅಮ್ಮ ಪೇಟೆಯಿಂದ ಬಂದಳು. ನೀತುವಿನ ಕೆಲಸ ನೋಡಿ ಸಂತಸಪಟ್ಟಳು. ಅಮ್ಮ ಒಲೆಯಲ್ಲಿ ಕಾವಲಿ ಇಟ್ಟಳು. ದೋಸೆ ಹೊಯ್ದಳು. ನೀತು ಬಿಸಿಬಿಸಿಯಾದ ದೋಸೆ ತಿಂದು ಹೊಟ್ಟೆ ತುಂಬಿಸಿದಳು.



## ಉತ್ತರಿಸಿರಿ

- ನೀತು ಅಳಲು ಕಾರಣವೇನು?
- ಅಳುತ್ತಿರುವ ನೀತುವಿಗೆ ಅಕ್ಕಿ ನೀಡಿದ ಸಲಹೆಯೇನು?
- ನೀತು ದೋಸೆ ಹಿಟ್ಟನ್ನು ಹೇಗೆ ತಯಾರಿಸಿದಳು?
- ಮನೆಗೆ ತಲುಪಿದಾಗ ಅಮ್ಮನಿಗೆ ಸಂತಸವಾಗಲು ಕಾರಣವೇನು?

## ಬರೆಯಿರಿ

**ಕೆಳಗೆ ಕೊಟ್ಟಿರುವ ಗಾದೆಮಾತುಗಳು ಹಾಗೂ ಅವುಗಳ ಆಶಯಗಳನ್ನು ಓದಿರಿ. ಅವುಗಳನ್ನು ಗೆರೆ ಎಳೆದು ಹೊಂದಿಸಿರಿ.**

| ಗಾದೆ | ಆಶಯ |
|---|---|
| ಉದ್ದು ಮದ್ದನ್ನು ಕೆಡಿಸಿತು. | ಆರೋಗ್ಯದಿಂದ ಇರಬೇಕಾದರೆ ಉತ್ತಮವಾದ ಆಹಾರವನ್ನು ಸೇವಿಸಬೇಕು. ಇದರೊಂದಿಗೆ ಉತ್ತಮ ಸಂಬಂಧವನ್ನು ಉಳಿಸಿಕೊಳ್ಳಲು ಒಳ್ಳೆಯ ಮಾತುಗಾರನಾಗಬೇಕು. |
| ಊಟಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ | ದೇಹದ ಆರೋಗ್ಯಕ್ಕೆ ಅಗತ್ಯವಿಲ್ಲದ ತಿಂಡಿ ತಿನಸುಗಳನ್ನು ತಿನ್ನಬಾರದು. ಇದರಿಂದ ಆರೋಗ್ಯ ಹಾಳಾಗುವುದು. ಅದರ ಬದಲು ಉತ್ತಮವಾದ ಸ್ವಲ್ಪ ಆಹಾರ ಸೇವಿಸುವುದು ಒಳ್ಳೆಯದು. |
| ಕಸ ತಿನ್ನೋದಕ್ಕಿಂತ ತುಸು ತಿನ್ನು | ಅನಾರೋಗ್ಯ ಬಂದಾಗ ಆಹಾರದಲ್ಲಿ ಜಾಗರೂಕತೆಯನ್ನು ಮಾಡಬೇಕು. ಇಲ್ಲದಿದ್ದರೆ ಅನಾರೋಗ್ಯಕ್ಕೆ ಯಾವ ಮದ್ದು ಹಿಡಿಸದು. |

## ಬರೆಯಿರಿ

**ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿರುವ ಅಕ್ಷರಗಳನ್ನು ಸರಿಪಡಿಸಿ ಬರೆಯಿರಿ.**

- ಅಂಮ ಪೆಟೆಇಂದ ಬಂದರು.
- ನಿತು ದೊಸೆ ಇಟ್ಟನ್ನು ತಯಾರಿಸಿದಲು.
- ಜೊರಗಿ ಅಲುತ್ತ ಕುಲಿತಲು




ಕೆಳಗಿನ ಚಿತ್ರಗಳಲ್ಲಿ ನಾವು ಸೇವಿಸುವ ವಿವಿಧ ಆಹಾರ ಪದಾರ್ಥಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸಸ್ಯಗಳಿಂದ ದೊರೆಯುವವುಗಳ ಕೆಳಗೆ ಹಸಿರು ಚುಕ್ಕಿಯನ್ನೂ ಪ್ರಾಣಿಗಳಿಂದ ದೊರೆಯುವವುಗಳ ಕೆಳಗೆ ಕೆಂಪು ಚುಕ್ಕಿಯನ್ನೂ ಹಾಕಿರಿ.


















## ಹೇಳಿರಿ

ಚಿತ್ರದಲ್ಲಿರುವ ಇಬ್ಬರು ಮಕ್ಕಳನ್ನು ಗಮನಿಸಿರಿ. ಇವರ ಆಹಾರಾಭ್ಯಾಸಗಳ ಬಗ್ಗೆ ಚರ್ಚಿಸಿರಿ.





## ಬರೆಯಿರಿ

ಆರೋಗ್ಯಪೂರ್ಣ ಬೆಳವಣಿಗೆಗೆ ಅಗತ್ಯವಾದ ಆಹಾರವಸ್ತುಗಳನ್ನು ಪಟ್ಟಿ ಮಾಡಿರಿ.

**ಸರಳಪ್ರಯೋಗ**

ಒಂದು ಬೀಟ್‌ರೂಟ್ ಗಡ್ಡೆಯನ್ನು ತುಂಡುಮಾಡಿ ಒಂದು ತಟ್ಟೆಯಲ್ಲಿರಿಸಿರಿ. ಒಂದು ಲೋಟದಲ್ಲಿ ಸ್ವಲ್ಪ ನೀರನ್ನು ತೆಗೆದುಕೊಂಡು ಅದರಲ್ಲಿ ತುಂಡು ಮಾಡಿದ ಬೀಟ್‌ರೂಟನ್ನು ಹಾಕಿ ಸ್ವಲ್ಪ ಸಮಯ ಇರಿಸಿರಿ. ಬಳಿಕ ನೀರಿನ ಬಣ್ಣವನ್ನು ಗಮನಿಸಿರಿ. ಏನನ್ನು ಕಾಣುವಿರಿ? ಕಾರಣವನ್ನು ನಿಮ್ಮ ಪರಿಸರ ಪುಸ್ತಕದಲ್ಲಿ ಬರೆಯಿರಿ.



**ಚರ್ಚಿಸಿರಿ :**

ನಿಮ್ಮ ಸುತ್ತಮುತ್ತಲು ಸಿಗುವ ಆಹಾರ ಪದಾರ್ಥಗಳಲ್ಲಿ ಬಣ್ಣವಿರುವ ಆಹಾರವಸ್ತುಗಳನ್ನು ಕಂಡುಹಿಡಿದು ಪಟ್ಟಿ ಮಾಡಿರಿ. ಅವುಗಳಿಗೆ ಹೇಗೆ ಬಣ್ಣ ಬಂತು ಚರ್ಚಿಸಿರಿ.

**ಬರೆಯಿರಿ**

**ಈ ಪದ್ಯದ ಸಾಲುಗಳನ್ನು ಮುಂದುವರಿಸಿ ಬರೆಯಿರಿ.**

ಬನ್ನಿರಿ ಎಲ್ಲರು ಸೇರೋಣ
ಚಕ್ಕುಲಿ ಹೋಳಿಗೆ ಮಾಡೋಣ
ಎಲ್ಲರು ಹಂಚುತ ತಿನ್ನೋಣ

____________________

____________________

____________________

## ಬರೆಯಿರಿ

ಚಿತ್ರನೋಡಿ ಕಥೆ ಬರೆಯಿರಿ.

















# ಅತಿ ಆಸೆ



ಹಸಿದ ಹೊಟ್ಟೆಯಿಂದ ನಾಯಿ
ರೊಟ್ಟಿಗಾಗಿ ತಿರುಗಿತು
ಊರ ದಾಟಿ ಹಳ್ಳದಾಚೆ
ಹುಡುಕಲೆಂದು ಹೊರಟಿತು ॥

ಅಲ್ಲಿ ಹೊಲದ ಗುಡಿಸಲಲ್ಲಿ
ಬುತ್ತಿಗಂಟು ದೊರಕಿತು
ರೊಟ್ಟಿಯೊಂದನೆತ್ತಿಕೊಂಡು
ಹಿಗ್ಗಿನಿಂದ ಮರಳಿತು ॥

ಹಳ್ಳದಾಟುವಾಗ ನೋಟ
ನೀರಿನಲ್ಲಿ ಬಿದ್ದಿತು
ರೊಟ್ಟಿ ಹಿಡಿದ ಬೇರೆ ನಾಯಿ
ಕಂಡು ರೊಚ್ಚಿಗೆದ್ದಿತು ॥

ಅದನು ಕಿತ್ತುಕೊಳ್ಳಲೆಂದು
ಬಾಯಿತೆರೆದು ಬೊಗಳಿತು
ರೊಟ್ಟಿ ಜಾರಿ ಹಳ್ಳದಲ್ಲಿ
ಬಿದ್ದು ಬಿಡಲು ಮರುಗಿತು ॥



ಆಸೆಯಿಂದ ತನ್ನದನ್ನು
ಕಳೆದುಕೊಂಡ ತಪ್ಪಿಗೆ
ಡೊಂಕುಬಾಲ ಎತ್ತಿಕೊಂಡು
ಓಡಿತಾಗ ತೆಪ್ಪಗೆ ॥

# ಕಲಿಕಾ ಸಾಧನೆಗಳು

## ಕನ್ನಡ

1. ಸ್ವಂತ ಭಾಷಾಶೈಲಿಯನ್ನು ಬಳಸಿಕೊಂಡು ತನ್ನ ಆಶಯ ಪ್ರತಿಬಿಂಬಿಸುವಂತೆ ಸರಳ ಟಿಪ್ಪಣಿಯನ್ನು ತಯಾರಿಸುವುದು.
2. ನೀಡಿದ ಸಾಲುಗಳ ಲಯವನ್ನು ಪರಿಗಣಿಸಿಕೊಂಡು ಸೂಕ್ತವಾದ ಸಾಲುಗಳನ್ನು ಸೇರಿಸಿ ಹಾಡುವುದು ಮತ್ತು ಬರೆಯುವುದು.
3. ಪೂರ್ಣವಿರಾಮ, ಪ್ರಶ್ನಾರ್ಥಕ ಚಿಹ್ನೆ, ಅರ್ಧವಿರಾಮ ಮೊದಲಾದ ಲೇಖನ ಚಿಹ್ನೆಗಳನ್ನು ಗುರುತಿಸಿಕೊಂಡು ಸೂಕ್ತವಾದ ರೀತಿಯಲ್ಲಿ ಓದುವುದು.
4. ಶಿಶುಗೀತೆಗಳನ್ನು ರಾಗ, ತಾಳಗಳೊಂದಿಗೆ ಹಾಡುವುದು.
5. ಸರಳ ಒಗಟುಗಳ ಉತ್ತರಗಳನ್ನು ಕಂಡುಹಿಡಿದು ಸರಳವಾದ ಹೊಸ ಒಗಟುಗಳನ್ನು ರಚಿಸುವುದು.
6. ಚಿತ್ರಕಥೆಗಳನ್ನು ನಿರೀಕ್ಷಣೆ ಮಾಡಿ ಆಶಯಗಳನ್ನು ಕ್ರಮೀಕರಿಸಿ ಕಥೆ ಹೇಳುವುದು ಮತ್ತು ಬರೆಯುವುದು.

## ಪರಿಸರ

1. ಆಹಾರವು ವಿವಿಧ ಘಟಕಗಳ ಮಿಶ್ರಣವಾಗಿದೆ.
2. ಹಸಿಯಾಗಿ ಮತ್ತು ಬೇಯಿಸಿ ತಿನ್ನುವ ಆಹಾರಗಳಿವೆ.
3. ಆಹಾರದಲ್ಲಿ ಒಳಗೊಂಡಿರುವ ಘಟಕಗಳಿಂದಾಗಿ ಆಹಾರದ ರುಚಿಯಲ್ಲಿ ವ್ಯತ್ಯಾಸವುಂಟಾಗುತ್ತದೆ.
4. ಸಮೀಕೃತ ಆಹಾರವು ಆರೋಗ್ಯಪೂರ್ಣ ಬೆಳವಣಿಗೆಗೆ ಅಗತ್ಯ.
5. ಉತ್ತಮ ಆರೋಗ್ಯಕ್ಕೆ ಹಣ್ಣು ತರಕಾರಿಗಳು ಅತ್ಯಗತ್ಯವಾಗಿವೆ.
6. ಆಹಾರ ತಯಾರಿಯಲ್ಲಿ ಬೇರೆ ಬೇರೆ ವಿಧಾನಗಳಿವೆ.
7. ಆಹಾರ ವಸ್ತುಗಳಿಗೆ ರುಚಿ, ಬಣ್ಣ, ಪರಿಮಳ ಬರಲು, ಹೆಚ್ಚು ಕಾಲ ಕೆಡದಂತೆ ಉಳಿಯಲು ಕೆಲವು ಪದಾರ್ಥಗಳನ್ನು ಸೇರಿಸುತ್ತಾರೆ.

ಪಾಠ - 8

# ಸಂತಸದ ಯಾನ

## ಕಿಟ್ಟುವಿನ ಕಾರು



ಕಿಟ್ಟುವಿನ ಬಳಿ ಒಂದು ಪುಟ್ಟ ಕಾರು ಇತ್ತು. ಅದರ ಹೆಸರು ರೋಮಿ. ಅದಕ್ಕೆ ಸ್ವತಂತ್ರವಾಗಿ ಚಲಿಸುವ ಸಾಮರ್ಥ್ಯವಿತ್ತು. ಒಂದು ದಿನ ಕಿಟ್ಟು ರೋಮಿಯೊಂದಿಗೆ ಆಟದ ಬಯಲಿಗೆ ಹೋದನು. ಗೆಳೆಯರೊಂದಿಗೆ ಆಡುತ್ತಾ ಇದ್ದನು. ಎಷ್ಟು ಹೊತ್ತಾದರೂ ಅವನು ರೋಮಿಯ ಹತ್ತಿರ ಬರಲೇ ಇಲ್ಲ. ರೋಮಿಗೆ ತುಂಬಾ ಬೇಸರವಾಯಿತು.



ಸ್ವಲ್ಪ ಸುತ್ತಾಡಿಕೊಂಡು ಬರುತ್ತೇನೆ ಎಂದು ರೋಮಿ ಯೋಚಿಸಿತು. ಡ್ರೊಂ... ಡ್ರೊಂ.... ಎಂದು ಸದ್ದು ಮಾಡುತ್ತಾ ರೋಮಿ ದೂರಕ್ಕೆ ಹೋಯಿತು.

ದೂರ ಸಾಗಿದ ರೋಮಿ ಒಂದು ಪಟ್ಟಣ ತಲುಪಿತು. ಅಲ್ಲಿ ತುಂಬಾ ರಸ್ತೆಗಳಿದ್ದವು. ರಸ್ತೆಯ ಎರಡೂ ಬದಿಗಳಲ್ಲಿ ಅಂಗಡಿಗಳು. ರಸ್ತೆ ತುಂಬಾ ವಾಹನಗಳು. ರೋಮಿಗೆ ಗಾಬರಿಯಾಯಿತು. ಅದಕ್ಕೆ ಎಲ್ಲಿಗೆ ಹೋಗಬೇಕೆಂದೇ ತಿಳಿಯಲಿಲ್ಲ.



ಕೊನೆಗೆ ಒಂದು ರಸ್ತೆಯಲ್ಲಿ ಮುಂದಕ್ಕೆ ಹೋಯಿತು. ಮುಂದಕ್ಕೆ ಸಾಗುತ್ತಿದ್ದಂತೆ ಎದುರಿನಿಂದ ಒಂದು ದೊಡ್ಡ ಬಸ್ಸು ಬಂತು. ಅದನ್ನು ತಪ್ಪಿಸಿಕೊಂಡು ಮುಂದೆ ಸಾಗಿತು. ಮುಂದಿನಿಂದ ಒಂದರ ಹಿಂದೆ ಒಂದರಂತೆ ಹಲವು ವಾಹನಗಳು ಬರುವುದನ್ನು ಕಂಡು ರೋಮಿ ರಸ್ತೆ ಬದಲಾಯಿಸಿತು. ಮುಂದೆ ಮುಂದೆ ಸಾಗಿದ ರೋಮಿ ಒಂದು ವಿಶಾಲ ಸ್ಥಳವನ್ನು ತಲುಪಿತು.




ರೋಮಿ ಅಲ್ಲೇ ಸ್ವಲ್ಪ ಹೊತ್ತು ನಿಂತಿತು. ಪಕ್ಕನೆ ದೊಡ್ಡದಾದ ಒಂದು ಶಬ್ದ ಕೇಳಿಸಿತು. ರೋಮಿ ತಲೆ ಎತ್ತಿ ಶಬ್ದ ಬಂದ ಕಡೆ ನೋಡಿತು. ದೊಡ್ಡ ವಾಹನವೊಂದು ಮೇಲಕ್ಕೆ ಹಾರಿತು. ರೋಮಿಗೆ ಹಾಗೆ ಆಕಾಶದಲ್ಲಿ ಹಾರಬೇಕು ಎಂದು ಆಸೆಯಾಯಿತು. ಅದು ಹಾರಲು ಪ್ರಯತ್ನಿಸಿತು. ಆದರೆ ಅದಕ್ಕೆ ಹಾರಲು ಸಾಧ್ಯವಾಗಲಿಲ್ಲ. ಅದೇ ಬೇಸರದಲ್ಲಿ ರೋಮಿ ಮುಂದಕ್ಕೆ ಹೋಯಿತು.



ಮುಂದಕ್ಕೆ ಸಾಗಿದ ರೋಮಿ ಒಂದು ಸಮುದ್ರತೀರ ತಲುಪಿತು. ಅಲ್ಲಿ ನಿಂತು ಸಮುದ್ರದ ಕಡೆಗೆ ಕಣ್ಣು ಹಾಯಿಸಿತು. ಅಲ್ಲಿ ದೋಣಿಯೊಂದು ಸಮುದ್ರದ ಅಲೆಗಳ ಮೇಲೆ ತೇಲುತ್ತಾ ಮುಂದೆ ಸಾಗುತ್ತಿತ್ತು. ರೋಮಿಗೆ ನೀರಿನಲ್ಲಿ ಸಂಚರಿಸಬೇಕೆಂದು ಆಸೆಯಾಯಿತು. ಆಸೆಯಿಂದ ದೋಣಿಯನ್ನು ನೋಡುತ್ತಾ ನಿಂತಿತು.

ಅಷ್ಟರಲ್ಲಿ ಆಟ ಮುಗಿಸಿದ ಕಿಟ್ಟು ಮನೆಗೆ ಹಿಂತಿರುಗಲು ರೋಮಿಯನ್ನು ಕರೆದನು. ಆದರೆ ರೋಮಿ ಬರಲೇ ಇಲ್ಲ. ರೋಮಿಗಾಗಿ ಸುತ್ತಲೂ ಹುಡುಕಾಡಿದನು. ಮುಂದೆ ಮುಂದೆ ಸಾಗಿದನು. ದೂರದಲ್ಲಿ ಸಮುದ್ರತೀರದಲ್ಲಿ ರೋಮಿ ನಿಂತಿರುವುದನ್ನು



ಕಂಡನು. ಓಡುತ್ತಾ ರೋಮಿಯ ಬಳಿ ಹೋದನು. ರೋಮಿ ತುಂಬಾ ಬೇಸರದಲ್ಲಿತ್ತು. ಏನಾಯಿತು? ಯಾಕೆ ಬೇಸರದಿಂದಿರುವೆ? ಕಿಟ್ಟು ಕೇಳಿದನು. ರೋಮಿ ತನ್ನ ಆಸೆಯನ್ನು ಹೇಳಿತು. ರೋಮಿ ನಿನ್ನನ್ನು ಆಕಾಶದಲ್ಲಿ ಹಾರುವಂತೆಯೂ ನೀರಿನಲ್ಲಿ ತೇಲುವಂತೆಯೂ ಮಾಡುತ್ತೇನೆ. ಇಲ್ಲೇ ಸಮೀಪದ ಮೆಕ್ಯಾನಿಕ್ ಮಾಮನ ಬಳಿ ಹೋಗೋಣ ಎಂದನು. ಇಬ್ಬರೂ ಮೆಕ್ಯಾನಿಕ್ ಮಾಮನ ಬಳಿ ಬಂದರು.



ಮೆಕ್ಯಾನಿಕ್ ಮಾಮ
ರೋಮಿಗೆ ಆಕಾಶದಲ್ಲಿ
ಹಾರಲು ಮತ್ತು ನೀರಿನಲ್ಲಿ
ಸಂಚರಿಸಲು ಬೇಕಾದ
ಬದಲಾವಣೆಗಳನ್ನು
ಮಾಡಿದನು. ರೋಮಿಗೆ
ಸಂತೋಷವಾಯಿತು.



ರೋಮಿ ಕಿಟ್ಟುವನ್ನು ಕರೆದುಕೊಂಡು
ಆಕಾಶದಲ್ಲಿ ಹಾರುತ್ತಾ ಮನೆಗೆ ಬಂತು.



## ಉತ್ತರಿಸಿರಿ

- ರೋಮಿ ಪೇಟೆಗೆ ಹೋಗಲು ಕಾರಣವೇನು?
- ಪಟ್ಟಣ ತಲುಪಿದ ರೋಮಿಗೆ ಯಾಕೆ ಗಾಬರಿಯಾಯಿತು?
- ರೋಮಿ ರಸ್ತೆ ಬದಲಾಯಿಸಲು ಕಾರಣವೇನು?
- ರೋಮಿಗೆ ಮುಂದೆ ಸಾಗುತ್ತಿದ್ದಂತೆ ಏನೇನು ಕಾಣಸಿಕ್ಕಿದುವು?
- ಕಿಟ್ಟು ರೋಮಿಯನ್ನು ಮೆಕ್ಯಾನಿಕ್ ಮಾಮನ ಬಳಿ ಕರೆದುಕೊಂಡು ಹೋದುದು ಯಾಕೆ?

## ಬರೆಯಿರಿ

**ಆವರಣದಿಂದ ಸರಿಯಾದ ಪದವನ್ನು ಆರಿಸಿ ಬಿಟ್ಟ ಸ್ಥಳವನ್ನು ತುಂಬಿಸಿರಿ.**

- ರೋಮಿ ________________ ತಲುಪಿತು
  (ಪಟ್ಟನ, ಪತ್ತಣ, ಪಟ್ಟಣ)
- ವಿಮಾನ ಮೇಲಕ್ಕೆ ________________
  (ಆರಿತು, ಹಾರಿತು, ಅರಿತು)
- ದೋಣಿ ನೀರಿನಲ್ಲಿ________________ ಹೋಗುವುದು.
  (ತೇಳಿಕೊಂಡು, ತೇಲಿಕೊಂಡು, ತೆಳಿಕೊಂಡು)
- ರೋಮಿಗೆ ತುಂಬಾ ________________ ಆಯಿತು.
  (ಭೇಸರ, ಬೇಸರ, ಭೆಸರ)
- ರೋಮಿಗೆ ________________ ಆಯಿತು.
  (ಸಂತೋಷ, ಸಂತೋಶ, ಸಂತೊಷ)




**'ರೋಮಿಯ ಪಯಣ'ಕಥೆಯ ಕೆಲವು ವಾಕ್ಯಗಳನ್ನು ಕೆಳಗೆ ಕೊಡಲಾಗಿದೆ. ಅವುಗಳನ್ನು ಅನುಕ್ರಮವಾಗಿ ಬರೆಯಿರಿ.**

- ಕಿಟ್ಟುವಿನ ಬಳಿ ರೋಮಿ ಎಂಬ ಕಾರು ಇತ್ತು.
- ಮೆಕ್ಯಾನಿಕ್ ಮಾಮನು ರೋಮಿಗೆ ಬೇಕಾದ ಬದಲಾವಣೆಗಳನ್ನು ಮಾಡಿದನು.
- ಅದು ಸುತ್ತಾಡುತ್ತಾ ಒಂದು ಪಟ್ಟಣವನ್ನು ತಲುಪಿತು.
- ಸಮುದ್ರ ತೀರದಲ್ಲಿರುವ ರೋಮಿಯನ್ನು ಕಂಡನು.
- ಕಿಟ್ಟು ರೋಮಿಯನ್ನು ಹುಡುಕುತ್ತಾ ಹೊರಟನು.
- ರೋಮಿಗೆ ಸಂತೋಷವಾಯಿತು.
- ತನ್ನನ್ನು ಆಕಾಶದಲ್ಲಿ ಹಾರುವಂತೆಯೂ ನೀರಿನಲ್ಲಿ ತೇಲುವಂತೆಯೂ ಮಾಡಲು ರೋಮಿ ಕಿಟ್ಟುವಿನಲ್ಲಿ ಹೇಳಿತು.




**ರೋಮಿಯ ಜೊತೆಯಲ್ಲಿ ಸುತ್ತಾಡಿದ ಕಿಟ್ಟು ಬರೆದ ತನ್ನ ಪ್ರಯಾಣದ ಅನುಭವ ಓದಿರಿ.**

ರೋಮಿಯ ಜೊತೆ ಹಾರಾಡುತ್ತಾ ನಾನು ಸಮುದ್ರದ ಬಳಿಗೆ ಹೋದೆನು. ನನಗೆ ಮೊದಲು ಹೆದರಿಕೆಯಾಯಿತು. ಸ್ವಲ್ಪ ಹೊತ್ತಿನ ಅನಂತರ ಧೈರ್ಯ ಬಂತು. ಆಕಾಶದಿಂದ ಕೆಳಗೆ ನೋಡಿದೆನು. ಕಟ್ಟಡಗಳು, ವಾಹನಗಳು ಸಣ್ಣ ಪೆಟ್ಟಿಗೆಗಳಂತೆ ಕಾಣುತ್ತಿದ್ದವು. ರಸ್ತೆಯ ಪ್ರಯಾಣಕ್ಕಿಂತ ಭಿನ್ನವಾದ ಅನುಭವ ನನಗೆ ಲಭಿಸಿತು. ಮೇಲೇರುವಾಗ ಹಾಗೂ ಕೆಳಗೆ ಇಳಿಯುವಾಗ ಸ್ವಲ್ಪ ಭಯವೂ ಆಯಿತು.




ನಿಮ್ಮ ಒಂದು ಪ್ರಯಾಣದ ಅನುಭವವನ್ನು ಬರೆಯಿರಿ.





ಚಿತ್ರದಲ್ಲಿರುವ ವಾಹನಗಳನ್ನು ಗುರುತಿಸಿ ಅವುಗಳಲ್ಲಿ ಇಂಧನ ಅಗತ್ಯವಿರುವ ವಾಹನಗಳ ಎದುರು ✓ ಗುರುತು ಹಾಕಿರಿ.
















## ಬರೆಯಿರಿ

ಚಿತ್ರದಲ್ಲಿ ಕೊಟ್ಟಿರುವ ವಾಹನದ ಭಾಗಗಳನ್ನು ಹೆಸರಿಸಿರಿ.



## ಬರೆಯಿರಿ

ನೀವು ಗುರುತಿಸಿದ ಭಾಗಗಳ ಉಪಯೋಗವನ್ನು ಬರೆಯಿರಿ.

| ಭಾಗ | ಉಪಯೋಗ |
|---|---|
| | |

# ಸಲಹೆ

ಪುಟ್ಟನು ಬಂದನು ಪೇಟೆಯ ನೋಡಲು
ಗೆಳೆಯರ ಜೊತೆಯಲಿ ಒಂದು ದಿನ
ವಾಹನ ತುಂಬಿದ ರಸ್ತೆಯ ನೋಡಲು
ಆಯಿತು ಅವರಿಗೆ ಗಲಿಬಿಲಿಯು ॥

ರಸ್ತೆಯ ದಾಟಲು ಏನನು ಮಾಡಲಿ
ಚಿಂತಿಸಿ ನಿಂತರು ಅಲ್ಲಲ್ಲಿ.
ಪೋಲಿಸ್ ಮಾಮನು ಬಂದನು ಬಳಿಗೆ
ನೀಡಿದ ಅವರಿಗೆ ಸಲಹೆಯನು ॥

ರಸ್ತೆಯ ಬದಿಯಲಿ ಮುಂದಕೆ ಹೋಗಲು
ಬಳಸಿರಿ ರಸ್ತೆಯ ಬಲದ ಬದಿ
ವಾಹನ ಓಡುವ ರಸ್ತೆಯ ದಾಟಲು
ಎಡಬಲ ನೋಡುತ ನಡೆಯುತಿರಿ ॥

ಪೇಟೆಯ ನಡುವೆ ರಸ್ತೆಯ ದಾಟಲು
ಜೀಬ್ರಾ ಕ್ರಾಸನು ಬಳಸಿ ಬಿಡಿ
ಸೂಚನೆ ಫಲಕವ ಪಾಲಿಸಿ ನಡೆಯಿರಿ
ನೆಮ್ಮದಿ ಬದುಕನು ಬಾಳುತಿರಿ.

**ಹಾಡಿರಿ**

ಈ ಪದ್ಯವನ್ನು ರಾಗವಾಗಿ ಹಾಡಿರಿ.

## ಉತ್ತರಿಸಿರಿ

- ಪುಟ್ಟನು ಗೆಳೆಯರ ಜೊತೆ ಎಲ್ಲಿಗೆ ಹೋದನು?
- ರಸ್ತೆ ದಾಟಲು ಪುಟ್ಟ ಮತ್ತು ಗೆಳೆಯರಿಗೆ ಸಲಹೆ ನೀಡಿದ್ದು ಯಾರು?
- ರಸ್ತೆಯನ್ನು ಅಡ್ಡ ದಾಟಲು ಪೋಲಿಸ್ ನೀಡಿದ ಸಲಹೆ ಏನು?
- ರಸ್ತೆ ಬದಿಯ ಸೂಚನಾ ಫಲಕವನ್ನು ನಾವು ಯಾಕೆ ಪಾಲಿಸಬೇಕು?

## ಬರೆಯಿರಿ

**ಕೆಳಗೆ ಕೊಟ್ಟ ವಾಕ್ಯಗಳಿಗೆ ಸಮಾನ ಅರ್ಥ ಬರುವ ಸಾಲನ್ನು ಪದ್ಯದಿಂದ ಆರಿಸಿ ಬರೆಯಿರಿ.**

- ನಡೆಯುವಾಗ ರಸ್ತೆಯ ಬಲಬದಿಯಲ್ಲಿ ನಡೆಯಬೇಕು.
- ರಸ್ತೆಯನ್ನು ಅಡ್ಡದಾಟುವಾಗ ಎಡ ಮತ್ತು ಬಲಬದಿಯನ್ನು ನೋಡಬೇಕು.
- ಪೇಟೆಯಲ್ಲಿ ರಸ್ತೆ ದಾಟಲು ಜೀಬ್ರಾಕ್ರಾಸನ್ನು ಬಳಸಬೇಕು.
- ಸೂಚನಾ ಫಲಕಗಳ ಸೂಚನೆ ಪಾಲಿಸಿದರೆ ಅಪಾಯವಿಲ್ಲ.

## ಬರೆಯಿರಿ

**ನಿಮ್ಮ ಶಾಲಾ ಪರಿಸರದಲ್ಲಿ ಸ್ಥಾಪಿಸುವುದಕ್ಕಾಗಿ ರಸ್ತೆ ನಿಯಮಕ್ಕೆ ಸಂಬಂಧಿಸಿದ ಸೂಚನಾ ಫಲಕಗಳನ್ನು ತಯಾರಿಸಿರಿ.**

## ಬರೆಯಿರಿ

**ಒಗಟಿಗೆ ಉತ್ತರ ಬರೆಯಿರಿ.**

- ಆಕಾಶದಲ್ಲಿ ಹಾರುವೆನು, ಜನರನು ದೂರಕೆ ಒಯ್ಯುವೆನು, ನಿಲ್ದಾಣದಲ್ಲಿ ಇಳಿಯುವೆನು

- ಇಂಧನ ಇಲ್ಲದೆ ಸಾಗುವೆನು, ಕಿಣಿ ಕಿಣಿ ಸದ್ದನು ಮಾಡುವೆನು.

- ಚುಕುಬುಕು ಎನ್ನುತ ಓಡುವೆನು, ಹೊಗೆಯನು ಉಗುಳುತ ಸಾಗುವೆನು

### ಆಲ್ಬಂ ತಯಾರಿಸಿರಿ.

**ವಿವಿಧ ವಾಹನಗಳ ಚಿತ್ರಗಳನ್ನು ಸಂಗ್ರಹಿಸಿ ಒಂದು ಆಲ್ಬಂ ತಯಾರಿಸಿರಿ.**

## ಬಣ್ಣ ಹಚ್ಚಿರಿ

**ನಿಮಗೆ ಇಷ್ಟವಿರುವ ಯಾವುದಾದರೊಂದು ವಾಹನದ ಚಿತ್ರ ಬಿಡಿಸಿ, ಬಣ್ಣ ಹಚ್ಚಿರಿ**

**ಚರ್ಚಿಸಿರಿ.**

**ಇಂಧನವನ್ನು ಬಳಸುವ ಮತ್ತು ಬಳಸದ ವಾಹನಗಳ ಒಳಿತು ಕೆಡುಕುಗಳ ಬಗ್ಗೆ ಚರ್ಚಿಸಿರಿ.**

## ಬರೆಯಿರಿ

- ಚಿತ್ರವನ್ನು ನೋಡಿ ವಾಹನಗಳಿಂದ ಆಗುವ ತೊಂದರೆಗಳೇನು ಎಂದು ಬರೆಯಿರಿ.



## ಬರೆಯಿರಿ

**ಕೆಳಗೆ ಕೊಟ್ಟಿರುವ ವಾಹನಗಳ ಪಟ್ಟಿಯನ್ನು ಮುಂದುವರಿಸಿ ಅವುಗಳ ಪ್ರಯೋಜನಗಳನ್ನು ಬರೆಯಿರಿ.**

- ಬಸ್ಸು — ಪ್ರಯಾಣಕ್ಕೆ
- ಟೆಂಪೋ — ಸರಕುಸಾಗಣೆಗೆ, ಪ್ರಯಾಣಕ್ಕೆ
- ದೋಣಿ — ಸರಕು ಸಾಗಣೆಗೆ, ಪ್ರಯಾಣಕ್ಕೆ, ಕ್ರೀಡೆಗೆ
- ಬೈಕು — ಪ್ರಯಾಣಕ್ಕೆ, ಕ್ರೀಡೆಗೆ
-
-
-

# ದೋಣಿ

ನೋಡದೊ ಆಕಡೆ
ತೇಲುತ ಮೇಗಡೆ
ದೋಣಿಯು ಮುಂದಕೆ ಸಾಗುತಿದೆ॥
    ನೀರನು ಗೀರಿ
    ದಾರಿಯ ತೋರಿ
    ದೋಣಿಯು ವೇಗದಿ ಹೋಗುತಿದೆ॥
ಜಳ್ಳವ ನೂಕಿ
ಹುಟ್ಟನು ಹಾಕಿ
ಅಂಬಿಗ ದೋಣಿಯ ದೂಡುವನು॥
    ದಿನದಿಂ ದಿನಕೆ
    ದಡದಿಂ ದಡಕೆ
    ಸಾಗಿಸಿ ದೋಣಿಯ ಹಾಡುವನು॥ 2 ॥
ಹುಟ್ಟನು ಹಾಕುವ
ರಟ್ಟೆಯ ನೋಡದೊ
ಭೀಮನಂತೆ ಬಲು ಬಲವಂತ॥



ಆ ತೆರೆ ಈ ತೆರೆ
ಎದ್ದರು ಬಿದ್ದರು
ದೋಣಿ ಸಾಗುತಿದೆ ತೇಲುತ್ತ॥ 3 ॥

ಅಂಬಿಗನೊಂದೇ
ದೋಣಿಯ ಕಸುಬು
ಅವನಿಂದಲೆ ಹೊಳೆದಾಟುವುದು॥
ದಾಟಿದ ಮುಂದೆ
ಇಲ್ಲವೆ ನೆನಪು
ದುಡ್ಡುಕೊಡುತ ಕೈ ಮುಗಿಯುವುದು॥ 4 ॥

ತೇಲುತಲಿರಲಿ
ದೋಣಿಯು ಹೀಗೆ
ನಲಿಯುತ ನಲಿಯುತ ನೀರಿನಲಿ॥
ದಾಟಿಸುತಿರಲಿ
ದಡದಿಂ ದಡಕೆ
ಅಂಬಿಗ ನಮ್ಮನು ದೋಣಿಯಲಿ॥ 5 ॥

**– ಕಯ್ಯಾರ ಕಿಞ್ಞಣ್ಣ ರೈ**

## ಹಾಡಿರಿ

**ಈ ಪದ್ಯವನ್ನು ರಾಗವಾಗಿ ಹಾಡಿರಿ.**

## ಬರೆಯಿರಿ

- ನೀರಿನ ಮೇಲೆ ತೇಲುತ ಮುಂದೆ ಸಾಗುವುದು ಯಾವುದು?
- ಅಂಬಿಗನು ದೋಣಿಯನ್ನು ನೀರಿನಲ್ಲಿ ಹೇಗೆ ದೂಡುವನು?
- ಹೊಳೆ ದಾಟಿಸುವವನು ಯಾರು?
- ಅಲೆಗಳು ಎದ್ದರು ಬಿದ್ದರು ದೋಣಿ ಏನು ಮಾಡುತ್ತದೆ?
- ಅಂಬಿಗ ಏನು ಮಾಡುತಿರಲಿ ಎಂದು ಕವಿ ಆಶಿಸುತ್ತಾರೆ?




**ಪದ್ಯದಲ್ಲಿ ಬಂದಿರುವ ಪ್ರಾಸ ಪದಗಳನ್ನು ಹುಡುಕಿ ಬರೆಯಿರಿ.**

ಉದಾ : ಗೀರಿ - ತೋರಿ

...................................................................

...................................................................




ನೋಡದೋ ಆ ಕಡೆ
ತೇಲುತ ಮೇಗಡೆ
ದೋಣಿಯು ಮುಂದಕೆ ಸಾಗುತಿದೆ

**ಈ ಸಾಲುಗಳನ್ನು ಗದ್ಯರೂಪದಲ್ಲಿ ಬರೆದಾಗ**

ಆ ಕಡೆ ನೋಡು, ದೋಣಿಯು ಮೇಲೆ ತೇಲುತ್ತಾ ಮುಂದಕ್ಕೆ ಸಾಗುತ್ತಿದೆ.




**ಕೆಳಗಿನ ಸಾಲುಗಳನ್ನು ಗದ್ಯರೂಪದಲ್ಲಿ ಬರೆಯಿರಿ**

- ದಿನದಿಂ ದಿನಕೆ
  ದಡದಿಂ ದಡಕೆ
  ಸಾಗಿಸಿ ದೋಣಿಯ ಹಾಡುವನು

- ದಾಟಿದ ಮುಂದೆ
  ಇಲ್ಲವೆ ನೆನಪು
  ದುಡ್ಡುಕೊಡುತ ಕೈ ಮುಗಿಯುವುದು.

## ಬರೆಯಿರಿ

**ಈ ಪದ್ಯದ ಸಾಲುಗಳನ್ನು ಮುಂದುವರಿಸಿ ಬರೆಯಿರಿ.**

### ವಾಹನಗಳು

ಬಸ್ಸು ಬಂತು ಬಸ್ಸು
ಕೆಂಪು ಹಳದಿ ಬಸ್ಸು
ರಸ್ತೆಯಲ್ಲಿ ಬಸ್ಸು
ಆರು ಚಕ್ರದ ಬಸ್ಸು

..................................................

..................................................

..................................................

..................................................

## ಬರೆಯಿರಿ

**ಕೆಳಗೆ ಕೊಟ್ಟಿರುವ ಹೇಳಿಕೆಗಳಲ್ಲಿ ಸರಿಯಾದುದರ ಮುಂದೆ ✓ ಗುರುತು ಹಾಕಿರಿ. ತಪ್ಪಾಗಿದ್ದರೆ ✗ ಗುರುತು ಹಾಕಿರಿ.**

- ರಸ್ತೆ ದಾಟಲು ಝೀಬ್ರಾ ಪಟ್ಟಿಯನ್ನು ಬಳಸುವುದು. ☐
- ರೈಲು ಬರುವಾಗ ರೈಲ್ವೇ ಕ್ರಾಸಿಂಗ್ ದಾಟುವುದು. ☐
- ರಸ್ತೆಯ ಮಧ್ಯೆ ಆಟ ಆಡುವುದು. ☐
- ಸರದಿ ಸಾಲಿನಲ್ಲಿ ನಿಂತು ವಾಹನವನ್ನು ಹತ್ತುವುದು. ☐
- ಪಾದಚಾರಿಗಳು ರಸ್ತೆ ಬಲಬದಿಯಲ್ಲಿ ನಡೆಯುವುದು. ☐
- ಎರಡೂ ಬದಿಗಳನ್ನು ನೋಡದೆ ರಸ್ತೆಯನ್ನು ದಾಟುವುದು. ☐




**ಕೆಳಗೆ ಕೊಟ್ಟಿರುವ ವಾಹನಗಳನ್ನು ಹಿಂದಿನ ಕಾಲದ ವಾಹನಗಳು ಇಂದಿನ ಕಾಲದ ವಾಹನಗಳು ಎಂದು ವರ್ಗೀಕರಿಸಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.**

**ಲಾರಿ, ಜೀಪು, ಕುದುರೆಗಾಡಿ, ತೆಪ್ಪ, ಮೋಟಾರುಬೈಕು**
**ಎತ್ತಿನಗಾಡಿ, ರಿಕ್ಷಾ, ಪಲ್ಲಕ್ಕಿ**

| ಹಿಂದಿನ ಕಾಲದ ವಾಹನಗಳು | ಇಂದಿನ ಕಾಲದ ವಾಹನಗಳು |
|---|---|
| • | • |
| • | • |
| • | • |
| • | • |

**ಚರ್ಚಿಸಿರಿ**

**ಹಿಂದಿನ ಕಾಲದ ವಾಹನಗಳಿಗೂ ಇಂದಿನ ಕಾಲದ ವಾಹನಗಳಿಗೂ ಇರುವ ವ್ಯತ್ಯಾಸಗಳೇನು?**

ನಾನು ಕಂಡುಕೊಂಡ ವ್ಯತ್ಯಾಸಗಳು :

# ಯಾನ ನಿಯಂತ್ರಣ



ನಾಲ್ಕು ರಸ್ತೆ ಕೂಡುವಲ್ಲಿ
ರಸ್ತೆ ಮಧ್ಯೆ ವೃತ್ತವು
ತಿಳಿಯಿರೆಲ್ಲ ಏಕೆ ಅಲ್ಲಿ
ನಿಂತ ವ್ಯಕ್ತಿ ಕಾರ್ಯವು
ಕೈಲಿ ಸನ್ನೆ ಸೀಟಿಗಳಲಿ
ಯಾನ ಸುಗಮವಾಗಿಸಿ
ಅವಗಡಕ್ಕೆ ಟಾಟ ಕೊಡುವ
ಕಾರ್ಯದಕ್ಷ ಪೋಲಿಸು
ಶಿಸ್ತಿನಿಂದ ಸೇವೆ ಗೈವ
ಬಿಸಿಲು ಬೇಗೆಗಳುಕದ
ಅವನ ಸನ್ನೆಗಳನು ತಿಳಿದು
ನಡೆದರೆಲ್ಲರೊಳ್ಳೆದು
ರಸ್ತೆ ನಿಯಮ ಪಾಲನಕ್ಕೆ
ಇಹುದು ನೀತಿ ಸಂಹಿತೆ
ನಿಯಮದಡಿಯೊಳೆಲ್ಲರೊಂದೆ
ಅದರೊಳಿಲ್ಲುದಾರತೆ



**- ಮಧುರಕಾನನ ಗೋಪಾಲಕೃಷ್ಣ ಭಟ್ಟ**

# ಕಲಿಕಾ ಸಾಧನೆಗಳು

## ಕನ್ನಡ

1. ಸೂಕ್ತ ಸಂದರ್ಭಗಳಲ್ಲಿ ಆಲಿಸಿದ ವಿಚಾರಗಳನ್ನು ಸರಳವಾಕ್ಯಗಳಲ್ಲಿ ಬರೆಯುವುದು.
2. ಆಶಯಗಳನ್ನು ಮುಂದುವರಿಸಿಕೊಂಡು ಸಂದರ್ಭಕ್ಕನುಗುಣವಾಗಿ ಸಂಭಾಷಣೆ ನಡೆಸುವುದು.
3. ನೀಡಿದ ಸಾಲುಗಳ ಲಯವನ್ನು ಪರಿಗಣಿಸಿಕೊಂಡು ಸೂಕ್ತವಾದ ಸಾಲುಗಳನ್ನು ಸೇರಿಸಿಕೊಂಡು ಹಾಡುವುದು ಮತ್ತು ಬರೆಯುವುದು.
4. ಶಿಶುಗೀತೆಗಳನ್ನು ರಾಗ, ತಾಳಗಳೊಂದಿಗೆ ಹಾಡುವುದು.
5. ಸರಳ ಒಗಟುಗಳ ಉತ್ತರಗಳನ್ನು ಕಂಡುಹಿಡಿದು ಸರಳವಾದ ಹೊಸ ಒಗಟುಗಳನ್ನು ರಚಿಸುವುದು.
6. ಆಶಯವನ್ನು ಅರ್ಥೈಸಿ ಅಕ್ಷರ ಸ್ಫುಟತೆ, ಉಚ್ಚಾರ ಸ್ಪಷ್ಟತೆಯಿಂದ ಓದುವುದು.

## ಪರಿಸರ

1. ವಾಹನಗಳಿಂದ ಪ್ರಯೋಜನಗಳಿವೆ.
2. ವಾಹನಗಳಿಗೆ ವಿವಿಧ ಭಾಗಗಳಿವೆ.
3. ಉಪಯೋಗಕ್ಕನುಸರಿಸಿ ವಾಹನಗಳ ಭಾಗಗಳಲ್ಲಿ ವೈವಿಧ್ಯವಿದೆ.
4. ಹಿಂದಿನ ಕಾಲದ ಮತ್ತು ಇಂದಿನ ಕಾಲದ ವಾಹನಗಳಲ್ಲಿ ವ್ಯತ್ಯಾಸವಿದೆ.
5. ಇಂಧನದ ಸಹಾಯದಿಂದ ಮತ್ತು ಇಂಧನವಿಲ್ಲದೆ ಚಲಿಸುವ ವಾಹನಗಳಿವೆ.
6. ಸಾರ್ವಜನಿಕ ವಾಹನಗಳ ಬಳಕೆಯಿಂದ ವಾಹನದಟ್ಟಣೆಯನ್ನು ನಿಯಂತ್ರಿಸಬಹುದು.
7. ವಾಹನಗಳು ಪರಿಸರ ಮಾಲಿನ್ಯವನ್ನುಂಟು ಮಾಡುತ್ತವೆ.
8. ಪಾದಚಾರಿಗಳು ರಸ್ತೆನಿಯಮಗಳನ್ನು ಪಾಲಿಸಬೇಕು.